

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 240 Saturday 01-06-2024 E-mail : maruti.b.hosamani76@gmail.com Page: 4 Price : Rs. 1/-


## ಶಿಕ್ಷಕರ ನಿವೃತ್ತಿ ಜೀವನಕ್ಕೆ ಶುಭವಾಗಲಿ



**ಯಲಗೋಡ :** ದೇವರ ಹಿಪ್ಪರಗಿ ತಾಲೂಕಿನ ಯಲಗೋಡ ಗ್ರಾಮದ ಶಿಕ್ಷಕರು ಸೇವೆ ನಿರಂತರ ಪ್ರಾಮಾಣಿಕತೆ ತಮ್ಮ ಜೀವನ ಶಾಲೆಯ ಮಕ್ಕಳ ಜೊತೆ ಕಳೆದು ಒಳ್ಳೆಯ ಪ್ರಾಮಾಣಿಕ ಗುರುಗಳಾಗಿ ಮಕ್ಕಳಿಗೆ ಒಳ್ಳೆಯ ವಿದ್ಯೆ ಅಭ್ಯಾಸ ನೀಡಿ ಅವರಿಗೆ ಒಂದು ಹಂತಕ್ಕೆ ಮುಟ್ಟಿಸುವ ಕರ್ತವ್ಯ ಶಿಕ್ಷಕರ ಪಾತ್ರ ಮುಖ್ಯ, ಅದನ್ನು ಈ ಶಿಕ್ಷಕರು ಮಾಡಿ ತೋರಿಸಿದ್ದಾರೆ, ಈ ಶಿಕ್ಷಕರ ವಯೋನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಎಲ್ಲಾ ಶಿಕ್ಷಕರ ಬಳಗದೊಂದಿಗೆ ಅವರನ್ನು ಗೌರವಿಸಿ ಶುಭಹಾರೈಸಿದರು

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಯಲಗೋಡದಲ್ಲಿ ಇಂದು ತಮ್ಮ ಸರಕಾರಿ ಸೇವೆಯಿಂದ ವಯೋನಿವೃತ್ತಿ ಗೊಳ್ಳುತ್ತಿರುವ ಹಾಗೂ ಬೀಳ್ಕೊಡುಗೆ ಸಮಾರಂಭ ನಡೆಯಿತು,

ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಯಲಗೋಡ ಶ್ರೀ ಏ ಎಚ್ ಮುಲ್ಲಾ ಮುಖ್ಯ ಗುರುಗಳು ಹಾಗೂ ಶ್ರೀ ಎನ್ ಎಸ್ ಲಮಾಣಿ ಸಹಶಿಕ್ಷಕರು ಹಾಗೂ ಶ್ರೀ ಸಿ ಬಿ ಬೂದಿಹಾಳ ಸಹ ಶಿಕ್ಷಕರು ಶ್ರೀ ವೆಂಕಟೇಶ್ವರ ಪ್ರೌಢ ಶಾಲೆ ಯಲಗೋಡ ಹಾಗೂ ಜಿ ಎಂ ಗುಬ್ಬೇವಾಡ ಪ್ರಭಾರಿ ಮುಖ್ಯ ಗುರುಗಳು ಸರಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಯಲಗೋಡ ಇವರಿಗೆ ಸರಕಾರಿ ಮಾದರಿ ಪ್ರಾಥಮಿಕ ಶಾಲೆ ಯಲಗೋಡ ವತಿಯಿಂದ ಸತ್ಕಾರ ಸಮಾರಂಭ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಶ್ರೀ ಮಹಾಂತೇಶ ಕೂಟನೂರ ಯಲಗೋಡ ಸಿ ಆರ್ ಸಿ ಶ್ರೀ ವಿರೇಶ ಕರಕಳ್ಳಿಮಠ, ಎಲ್ ಪಿ ಎಸ್ ಭಜಂತ್ರಿ ಶಾಲೆಯ ಸೋಮಜಾಳ ಪ್ರಭಾರಿ ಮುಖ್ಯಗುರುಗಳಾದ ಶಿಕ್ಷಕರಾದ ಶ್ರೀ ಸಿ ಜಿ ಕಾಂಬಳೆ ಶ್ರೀ ಎ ಎಸ್ ಕುರಿ. ಶ್ರೀಸುರೇಶ ಬಡಿಗೇರ. ಶ್ರೀ ಮಲ್ಲಿಕಾರ್ಜುನ ಅಂಕಲಗಿ. ಶ್ರೀ ರಾಘವೇಂದ್ರ ಉಂಡಿಗೇರ. ಶ್ರೀ ದಸ್ತಗಿರಿಸಾಬ ಬಗಲಿ ಶ್ರೀ ಮಂಗಳಾಬಾಯಿ ಅಲ್ಮದ. ಕುಮಾರಿ ವಿದ್ಯಾವತಿ ಹನುಮಂತರೆಡ್ಡಿ. ಹಾಗೂ ವಿದ್ಯಾರ್ಥಿಗಳು, ಅಡುಗೆ ಸಿಬ್ಬಂದಿ ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ. ನ್ಯೂಸ್ ಕನ್ನಡ ಚಾನಲ್: ಭೀಮಪ್ಪ.ಹಚ್ಯಾಳ. ದೇವರ ಹಿಪ್ಪರಗಿ.**

## ಕಂದಗಲ್ಲ ಗ್ರಾಮದಲ್ಲಿ ಮನೆಯ ಮೇಲ್ಚಾವಣಿ ಕುಸಿದು ಅಕ್ಕ ತಮ್ಮ ಇಬ್ಬರು ಸಾವು

**ಕಂದಗಲ್ಲ :** ಬಾಗಲಕೋಟೆ ಜಿಲ್ಲೆಯ ಇಲಕಲ್ಲ ತಾಲೂಕಿನ ಕಂದಗಲ್ ಗ್ರಾಮದಲ್ಲಿ ನಡೆದಿದೆ. ಕುಸಿದು ಬಿದ್ದು ಶಾಲೆಗೆ ಹೋಗಬೇಕೆನ್ನುವ ಮುನ್ನವೆ ಮನೆಯ ಮೇಲ್ಚಾವಣಿ ಕುಸಿದು ಬಿದ್ದು ಸಾವನಪ್ಪಿದ ಇಲಕಲ್ ಸಮೀಪದ ಕಂದಗಲ್ ಗ್ರಾಮದಲ್ಲಿ. ಇಂದು ಬೆಳಿಗ್ಗೆ ಮನೆಯ ಮೇಲ್ಚಾವಣಿ ಆಕಸ್ಮಿಕ ಕುಸಿದು ಒಂದೇ ಕುಟುಂಬದ. ಇಬ್ಬರು ಅಕ್ಕ ತಮ್ಮ ಸಾವನಪ್ಪಿರುವ ದುರ್ಘಟನೆ ಮನೆಯಲ್ಲಿ ವಿಶ್ರಾಂತಿ ಮಾಡುತ್ತಿರುವಾಗ ಅತ್ಯಂತ ಹಳೆಯ ಮನೆಯ ಮೇಲ್ಚಾವಣಿ (ಜಂತಿಯೊಂದು) ಬಿದ್ದು ಮೃತ ದುರ್ದೈವಿಗಳಾಗಿದ್ದಾರೆ. ಇಳಕಲ್ ತಾಲೂಕಾ ಸರಕಾರಿ ಆಸ್ಪತ್ರೆಗೆ ನಿಧನರಾಗಿದ್ದಾರೋ ಇಲ್ಲೋ ಎನ್ನುವುದಕ್ಕೆ ಕರೆದುಕೊಂಡು ಬಂದ ಸಂದರ್ಭದಲ್ಲಿ ರಾಜ್ಯ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ಮಂಡಳಿಯ



ಅಧ್ಯಕ್ಷರು. ಶಾಸಕ ವಿಜಯಾನಂದ ಎಸ್. ಕಾಶಪ್ಪನವರ ಸ್ಥಳಕ್ಕೆ ಭೇಟಿ ನೀಡಿ ಮೃತರ ಪಾಲಕರಿಗೆ ಸಾಂತ್ವನ ಹೇಳಿ ಸರಕಾರದ ವತಿಯಿಂದ ಒಬ್ಬೊಬ್ಬರಿಗೆ 5 ಲಕ್ಷ ರೂ. ಕೊಡುವಂತೆ ಜಿಲ್ಲಾಧಿಕಾರಿಗಳಿಗೆ ಹಾಗೂ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೇನೆ. ಇಷ್ಟರಲ್ಲಿಯೆ ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗದ ಅಧಿಕಾರಿಗಳು ಬಂದು ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ ಎಂದರು. ತಾಲೂಕಾ ದಂಡಾಧಿಕಾರಿ ಸತೀಶ ಕೂಡಲಗಿ, ಕಂದಾಯ ನಿರೀಕ್ಷಕರು ನವೀನಕುಮಾರ ಬಲಕುಂದಿ ಮೊದಲಾದ ಅಧಿಕಾರಿಗಳು ಉಪಸ್ಥಿತರಿದ್ದರು. ಕಂದಗಲ್ ಗ್ರಾಮದಲ್ಲಿ ಮನೆಯ ಮೇಲ್ಚಾವಣಿ ಕುಸಿದು ಇಬ್ಬರ ಸಾವು ಇಳಕಲ್ ಗ್ರಾಮೀಣ ಪಿ.ಎಸ್.ಐ ಸತ್ತಿಗೌಡ್ರ ಪ್ರಕರಣ ದಾಖಲೆ ಮಾಡಿಕೊಂಡಿದ್ದಾರೆ ಆಸ್ಪತ್ರೆ ಮುಂದುಗಡೆ ಪಾಲಕರ ಆಕ್ರಂದನ ಮುಗಿಲು ಮುಟ್ಟಿತು.

**ತಾಲೂಕ ವರದಿಗಾರರು ಹಾಗೂ ಎಸ್. ಕೆ. ನ್ಯೂಸ್ ಕನ್ನಡ ಚಾನಲ್:ಪ್ರತಾಪ್ ವಾಯ್ ಕಿಳ್ಳಿ ಇಲಕಲ್ಲ.**

## "ಶಾಲಾ ಪ್ರಾರಂಭೋತ್ಸವ ಹಾಗೂ ದಾಖಲಾತಿ ಆಂದೋಲನ"



**ಬಾಗಲಕೋಟ :** ಜಿಲ್ಲೆಯ ಹುನಗುಂದ ತಾಲೂಕಿನ ಹಿರೇ ಮಳಗಾವಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿಶಾಲಾಪ್ರಾರಂಭೋತ್ಸವಹಾಗೂದಾಖಲಾತಿ ಆಂದೋಲನಕಾರ್ಯಕ್ರಮವುಮುಖ್ಯೋಪಾಧ್ಯಾಯರ ಸಮ್ಮುಖದಲ್ಲಿ ನೆರವೇರಿತು. ಮೊದಲಿಗೆ ಎಲ್ಲಾ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಾಯರು ಸರಸ್ವತಿ ಪೂಜೆಯನ್ನುನೆರವೇರಿಸಿ ವಿದ್ಯಾರ್ಥಿಗಳ ಜೊತೆಗೆ ಇಡೀ ಊರಿನ ತುಂಬೆಲ್ಲ ಘೋಷವಾರು ಫಲಕಗಳು ಜೊತೆಗೆ ಘೋಷಣೆಗಳನ್ನು ಕೂಗುತ್ತಾ ಜಾಥಾ ನಡೆಸಿದರು. ತದ ನಂತರ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಕೆಲವು ವಿದ್ಯಾರ್ಥಿಗಳನ್ನು ಒಂದನೇ ತರಗತಿಗೆ ದಾಖಲಾತಿ ಮಾಡಿ ಕೊಳ್ಳಲಾಯಿತು. ಮೊದಲ ದಿನವೇ ಶಾಲೆಗೆ ಸುಮಾರು50ಜನವಿದ್ಯಾರ್ಥಿಗಳುಬಂದಿದ್ದುಸಂತಸಕರ ವಿಷಯ. ವಿದ್ಯಾರ್ಥಿಗಳಿಗೆ ಸಿಹಿ ಊಟ ನೀಡಿ ಮೊದಲ ದಿನದ ಸಂಭ್ರಮವನ್ನು ಯಶಸ್ವಿಗೊಳಿಸಲಾಯಿತು.

ಮುಖ್ಯ ಗುರು ಮಾತೆಯರಾದ ಶ್ರೀಮತಿ ಬಿ. ಬಿ ದೇವದುರ್ಗ, ಹಿರಿಯ ಶಿಕ್ಷಕರಾದ ಶ್ರೀ ಬಿ. ಎಂ ಅಂಗಡಿ ಹಾಗೂ ಶ್ರೀ ಎಮ್ ಹೆಚ್ ಪೂಜಾರಿ ಗುರುಗಳು ಮತ್ತು ಶ್ರೀ ಮುತ್ತು ಯ.ವಡ್ಡರ, ಶ್ರೀ ಹೆಚ್ ಬಿ ಮಾದರ ಶಿಕ್ಷಕರೊಂದಿಗೆ ವಿದ್ಯಾರ್ಥಿಗಳು ಶಾಲಾ ಪ್ರಾರಂಭೋತ್ಸವದಲ್ಲಿಪಾಲ್ಗೊಂಡಿದ್ದರು.ಹಾಗೂಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಸದಸ್ಯರು ಮತ್ತು ಊರಿನ ಗುರು ಹಿರಿಯರು ಈ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಿದರು.

## ಹವಾಮಾನ ವೈಪರಿತ್ಯದ ಪರಿಣಾಮದ ಪರಿಹಾರ ಪ್ರಾಮುಖ್ಯತೆಯಲ್ಲಿ ಶುಶ್ರೂಷಕಿಯರ ಪಾತ್ರ




**ಬಾಗಲಕೋಟೆ :** ಶ್ರೀ ಬಿ.ವಿ.ವಿ.ಎಸ್ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಸವ ಮತ್ತು ಸ್ತ್ರೀರೋಗ ಶಾಸ್ತ್ರ ವಿಭಾಗದ ವತಿಯಿಂದ ದಿನಾಂಕ: 13/05/2024 ರಂದು ಅಂತರಾಷ್ಟ್ರೀಯ ಶುಶ್ರೂಷಕಿಯರ ದಿನಾಚರಣೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರದಲ್ಲಿ ಹಮ್ಮಿಕೊಳ್ಳಲಾಯಿತು. ಮಕ್ಕಳ ಮತ್ತು ತಾಯಂದಿರ ಆರೋಗ್ಯದ ಮೇಲೆ "ಹವಾಮಾನ ವೈಪರಿತ್ಯದ ಪರಿಣಾಮ ಪರಿಹಾರ ಮತ್ತು ಪ್ರಾಮುಖ್ಯತೆ" ಎಂಬ ಶೀರ್ಷಿಕೆಯ ಅಡಿಯಲ್ಲಿ ಶುಶ್ರೂಷಕಿಯರ ಪಾತ್ರ ಅಲ್ಲದೆ ತಾಯಿ ಮತ್ತು ಮಗುವಿನ ಸಂರಕ್ಷಣೆಯ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಧಿಕಾರಿಯಾದ ಡಾ. ಭಾಗ್ಯಶ್ರೀ ಬೆಂಡಿಗೇರಿ ಅವರು ಈಗಿನ ಹವಾಮಾನ ವೈಪರಿತ್ಯದ ಪರಿಹಾರ ಮತ್ತು ಪ್ರಸವ ಸಮಯದಲ್ಲಿ ತಾಯಂದಿರು ಮಗುವಿನ ಕಾಳಜಿ ತೆಗೆದುಕೊಳ್ಳುವ ಮತ್ತು ಆಹಾರದ ಬಗ್ಗೆ ಹಾಗೂ ಪ್ರಸವ ಮತ್ತು ಹೆರಿಗೆ ಸಮಯದಲ್ಲಿ ಶುಶ್ರೂಷಕಿಯರ ಪಾತ್ರ ಅತಿ ಮುಖ್ಯವಾದದ್ದು, ಎಲ್ಲ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ತಾಯಿ ಮಗುವನ್ನು ಕಾಪಾಡಿಕೊಳ್ಳುವುದು, ಮುಖ್ಯ ಜವಾಬ್ದರಿಯಾಗಿರುತ್ತದೆ ಎಂದು ಸವಿಸ್ತಾರವಾಗಿ ಶುಶ್ರೂಷಕಿಯರಿಗೆ ಹಾಗೂ ಆಶಾಕಾರ್ಯಕರ್ತೆಯರಿಗೆ ತಿಳಿಸಿದರು. ಹಾಗೂ ಹಿರಿಯ ಆರೋಗ್ಯ ನೀರಿಕ್ಷಣಾಧಿಕಾರಿಯಾದ ಶ್ರೀ ಅಶೋಕ ಎನ್ ಚಿತ್ತವಾಡಗಿ ಅವರು ಈ ಕಾರ್ಯಕ್ರಮದಲ್ಲಿಉಪಸ್ಥಿತರಿದ್ದರು.ಶ್ರೀಬಿ.ವಿ.ವಿ.ಎಸ್ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಸವ ಮತ್ತು ಸ್ತ್ರೀರೋಗ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಶ್ರೀಮತಿ ಶರಣಮ್ಮ ಬಂಟನೂರ ಅವರು ಹವಾಮಾನ ವೈಪರಿತ್ಯದ ಪರಿಹಾರ ಕುರಿತು ಹಾಗೂ ಪ್ರಸವ ಸಮಯದಿಂದ ಹೆರಿಗೆಯಾಗಿ 6 ತಿಂಗಳವರೆಗೆ ತಾಯಿ ಮಗುವನ್ನು ರಕ್ಷಸುವುದು ಸಹ ಕುಟುಂಬಸ್ಥರ ಮುಖ್ಯ ಪಾತ್ರ. ಇವೆಲ್ಲ ಸಂಗತಿಗಳನ್ನು ಶುಶ್ರೂಷಕಿಯರು ಹಾಗೂ ಆಶಾಕಾರ್ಯಕರ್ತೆಯರಿಗೆ ಈ ಸಂದೇಶವನ್ನು ಎಲ್ಲರಿಗೂ ತಿಳಿಸುವಂತವರಾಗಬೇಕು ಎಂದು ವಿವರಿಸಿದರು.

ತೃತೀಯ ವರ್ಷದ ಡಿಪ್ಲೋಮಾ ನರ್ಸಿಂಗ್ ವಿದ್ಯಾರ್ಥಿಗಳು ಕಿರು ನಾಟಕದ ಮೂಲಕ ಹವಾಮಾನ ವೈಪರಿತ್ಯದ ಪರಿಹಾರದ ಪ್ರಾಮುಖ್ಯತೆ ಬಗ್ಗೆ ಶುಶ್ರೂಷಕಿಯರ ಮತ್ತು ಆಶಾಕರ್ಯಕರ್ತೆಯರ ಪಾತ್ರದ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಶುಶ್ರೂಷಕಿಯರು ಹಾಗೂ ಆಶಾಕಾರ್ಯಕರ್ತೆಯರು ಪಾಲ್ಗೊಂಡಿದ್ದರು, ಹಾಗೂ ತೃತೀಯ ವರ್ಷದ ಡಿಪ್ಲೋಮಾ ನರ್ಸಿಂಗ್ ವಿದ್ಯಾರ್ಥಿಯಾದ ಸಚೀನ ಕಾಳಗಿ ಅವರು ಸ್ವಾಗತಿಸಿ, ಸಂಗೀತಾ ಹೆಳವರ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಳಿಸಲಾಯಿತು.

## ಬಳ್ಳಾರಿ ಜಿಲ್ಲೆಯಾದ್ಯಂತ ಖಾಸಗಿ ಅನಧಿಕೃತ ಶಾಲೆಗಳ ರದ್ದತಿಗೆ– ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಸಮಿತಿಯಿಂದ ಆಗ್ರಹ

**ಬಳ್ಳಾರಿ :** ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಸಮಿತಿ ಬಳ್ಳಾರಿ ನಗರ ಮತ್ತು ಆಯಾ ತಾಲೂಕಿನಾದ್ಯಂತ ಒಟ್ಟು ಜಿಲ್ಲೆಯಲ್ಲಿ ಸುಮಾರು 70 ಕ್ಕೂ ಹೆಚ್ಚು ಖಾಸಗಿ ಅನಧಿಕೃತ ಶಾಲೆಗಳಿದ್ದು, ಪ್ರತೀ ವರ್ಷ ನಾಯಿ ಕೊಡೆಗಳಂತೆ ಹತ್ತಾರು ಶಿಕ್ಷಣ ಸಂಸ್ಥೆಗಳು ತಲೆ ಎತ್ತುತ್ತಿವೆ. ಹೈಟೆಕ್ ಮಾದರಿ ಶಿಕ್ಷಣ ನೀಡುತ್ತೇವೆಂದು ಪ್ರಚಾರ ಗಿಟ್ಟಿಸಿ, ಪೋಷಕರನ್ನು ಮಕ್ಕಳನ್ನು ಅಡ್ಮಿಶನ್ ಮಾಡಿಸಿ ಕೊಂಡು ಮುಂದೆ ಟಿಸಿ ಬೇಕೆಂದಾಗ ಈ ಶಾಲೆಯ ಟಿಸಿ ನೀಡಲಾರದೆ ಬೇರೆಯವರ ಶಾಲೆಯ ಹೆಸರಿನ ಮೇಲೆ ಟಿಸಿ ಮೂಲ ವರ್ಗಾವಣೆಯ ಪ್ರಮಾಣ ಪತ್ರಗಳನ್ನು ನೀಡುತ್ತಿದ್ದು ಇನ್ನು ಕೆಲವು ವಿದ್ಯಾರ್ಥಿಗಳ ಟಿಸಿಗಳನ್ನು ನೀಡಲಾರದೆ ಇದ್ದಿದ್ದು ಪಾಲಕರು ಈ ರೀತಿಯಾಗಿ ವಂಚಿಸುತ್ತಿದ್ದು ಇದರ ಬಗ್ಗೆ ಶಿಕ್ಷಣ ಇಲಾಖೆ ಯಾವ ಶಾಲೆಗೆ ಮಾನ್ಯತೆ ಇದೆ. ಅನಧಿಕೃತ ಶಾಲೆ ಯಾವುದೆಂದು ಪೋಷಕರಿಗೆ ಅರಿವು ಮೂಡಿಸುವ ಕೆಲಸಕ್ಕೆ ಮುಂದಾಗುತ್ತಿಲ್ಲ. ವಿದ್ಯಾರ್ಥಿಗಳ ಭವಿಷ್ಯ ರೂಪಿಸ ಬೇಕಾಗಿರುವ ವಿದ್ಯಾ ದೇಗುಲಗಳು ಮಕ್ಕಳ ಜೀವನದ ಜತೆ ಚೆಲ್ಲಾಟವಾಡುತ್ತಿವೆ. ಪೋಷಕರ ನೂರಾರು ಕನಸುಗಳನ್ನು ನುಚ್ಚು ನೂರು ಮಾಡುತ್ತಿವೆ. ಜಿಲ್ಲೆಯಲ್ಲಿ ತಲೆ ಎತ್ತಿರುವ ಅನಧಿಕೃತ ಶಾಲೆಗಳ ವಿರುದ್ಧ ಕಾನೂನು ಕ್ರಮವಹಿಸಿ ಕಡಿವಾಣ ಹಾಕಬೇಕಿದ್ದ ಶಿಕ್ಷಣ ಇಲಾಖೆ ಕಣ್ಣಾ ಮುಚ್ಚಾಲೆ ಆಡುತ್ತಿದೆ.

ಮಕ್ಕಳನ್ನು ಚೆನ್ನಾಗಿ ಓದಿಸಬೇಕು, ಒಳ್ಳೆಯ ಶಿಕ್ಷಣ ನೀಡಿ ಉನ್ನತ ಹುದ್ದೆಗೇರಿಸಬೇಕು ಅಂತ ಅದೆಷ್ಟೋ ಪೋಷಕರು ಹಗಲಿರುಳು ಕಷ್ಟಪಟ್ಟು ದುಡಿದು ಮಕ್ಕಳನ್ನು ಹೈಟೆಕ್ ಶಾಲೆಗಳಿಗೆ ದಾಖಲಾತಿ ಮಾಡಿಸುತ್ತಾರೆ. ಆದರೆ ಅನಧಿಕೃತ ಶಾಲೆಗಳು ಪೋಷಕರ ಆಸೆಗಳಿಗೆ ಬೆಂಕಿ ಹಚ್ಚಲು ಮುಂದಾಗಿವೆ. ಶಾಲೆಗಳ ದಾಖಲಾತಿ ಪ್ರಕ್ರಿಯೆ ಶುರುವಾಗಿದ್ದರೂ, ಶಿಕ್ಷಣ ಇಲಾಖೆ ಮಾತ್ರ ಮೌನ ವಹಿಸಿದ್ದು, ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಆನಧಿಕೃತ ಶಾಲೆಗಳ ಪಟ್ಟಿ ಪ್ರಕಟಿಸುವಂತೆ ಕ್ರಮ ಕೈಗೊಳ್ಳಬೇಕು. ಜತೆಗೆ ಆಯಾ ಜಿಲ್ಲೆಗಳ ಪ್ರಮುಖ ಪತ್ರಿಕೆಗಳಲ್ಲಿ ಈ ಪಟ್ಟಿ ಪ್ರಕಟವಾಗುವಂತೆ ಕ್ರಮ ಕೈಗೊಳ್ಳಬೇಕೆಂದು ಪೋಷಕರು ಒತ್ತಾಯಿಸುತ್ತಿದ್ದರೂ ಶಿಕ್ಷಣ ಇಲಾಖಾಧಿಕಾರಿಗಳು ಕ್ಯಾರೇ ಅನ್ನುತ್ತಿಲ್ಲಾ. ಬೇರೆ ಪಠ್ಯ ಕ್ರಮ ಬೋಧಿಸುತ್ತಿರುವ ಶಾಲೆಗಳು, ನೋಂದಣಿ ಮತ್ತು ಮಾನ್ಯತೆ ಪಡೆದ ಶಾಲೆಯಲ್ಲಿ ಅಧಿಕೃತ ಪಠ್ಯಕ್ರಮದ ಬದಲಾಗಿ ಬೇರೆ ಪಠ್ಯಕ್ರಮ ಬೋಧಿಸುತ್ತಿರುವ ಶಾಲೆಗಳು ಕಂಡು ಬಂದಲ್ಲಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಉಪ ನಿರ್ದೇಶಕರು (ಆಡಳಿತ), ಇವರ ಕಚೇರಿಯ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ, ಸೇವಾ ನಿಯಮಾವಳಿ ಅನ್ವಯ ಕ್ರಮವಹಿಸಲಾಗುವುದು ಎನ್ನುತ್ತಾರೆ ಜಿಲ್ಲಾ ಉಪನಿರ್ದೇಶಕರು.

ಒಟ್ಟಿನಲ್ಲಿ ಜಿಲ್ಲೆಯ ಹಲವೆಡೆ ಪೋಷಕರಿಗೆ ದಾರಿ ತಪ್ಪಿಸುತ್ತಿರುವ ಅನಧಿಕೃತ ಶಾಲೆಗಳ ಕಳ್ಳಾಟದ ವಿರುದ್ಧ ಶಿಕ್ಷಣ ಇಲಾಖೆ ಇನ್ನಾದರೂ ಚಾಟಿ ಬೀಸಬೇಕಿದೆ. ಮುಂದಿನ ದಿನಗಳಲ್ಲಿ ಪೋಷಕರು ಮೋಸ ಹೋಗದಂತೆ ತಡೆಯಲು ಅನಧಿಕೃತ ಶಾಲೆಗಳ ಪಟ್ಟಿ ಬಿಡುಗ– 'ಡೆ ಗೊಳಿಸಿ ಅಂತಹ ಶಾಲೆಗಳ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಬೇಕು ಖಾಸಗಿ ಅನಧಿಕೃತ ಶಾಲೆಗಳನ್ನು ಕೂಡಲೇ ರದ್ದುಪಡಿಸ ಬೇಕು ಹಾಗೂ ಖಾಸಗಿ ಶಿಕ್ಷಣ ಅನಧಿಕೃತ ಶಾಲೆಗಳೊಂದಿಗೆ ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಆಡಳಿತ ಹಾಗೂ ಜಿಲ್ಲೆಯ ಎಲ್ಲಾ ತಾಲೂಕ ಕ್ಷೇತ್ರ ಶಿಕ್ಷಣಾಧಿಕಾರಿಗಳು ಖಾಸಗಿ ಶಾಲೆಗಳ ಮಾಲೀಕರೊಂದಿಗೆ ಶಾಮಿಲಾಗಿದ್ದು

ಇವರ ಮೇಲೆ ಕೂಡಲೇ ಕಟ್ಟುನಿಟ್ಟಿನ ಶಿಸ್ತಿನ ಕ್ರಮ ಜರುಗಿಸ ಬೇಕೆಂದು ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಸಮಿತಿಯಿಂದ ಆಗ್ರಹಿಸುತ್ತಿರುವ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ ಶಂಕರ್ ನಂದಿಹಾಳ ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

## ಶಾಲಾ ಪ್ರಾರಂಭೋತ್ಸವ ಹಾಗೂ ಸಮವಸ್ತ್ರ, ಪುಸ್ತಕ: ವಿತರಣಾ ಕಾರ್ಯಕ್ರಮ

**ಪಟ್ರೆಹಳ್ಳಿ :** ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಪಟ್ರೆಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯಲ್ಲಿ 2024–25 ನೇ ಸಾಲಿನ ಶಾಲೆಯ ಪ್ರಾರಂಭೋತ್ಸವದಲ್ಲಿ ಪೋಷಕರೊಂದಿಗೆ ಮಕ್ಕಳಿಗೆ ಸಿಹಿ ಹಂಚಿ ಸ್ವಾಗತಿಸಲಾಯಿತು. ಹಾಗೆ ಉಚಿತ ಸಮವಸ್ತ್ರ, ಪುಸ್ತಕ ವಿತರಣೆ ಮಾಡಲಾಯಿತು. ಸರ್ಕಾರಿ ಶಾಲೆಯನ್ನು ಉಳಿಸಿ ಬೆಳೆಸಬೇಕೆಂದು ಪೋಷಕರಿಗೆ ತಿಳಿಸಲಾಯಿತು.




ಇತ್ತೀಚಿನ ದಿನಗಳಲ್ಲಿ ಈ ವರ್ಷದ ಎಸ್ ಎಸ್ ಎಲ್ ಸಿ ಫಲಿತಾಂಶ ಗಮನಿಸಿದರೆ ಇಡೀ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ದಾಖಲೆ ಸೃಷ್ಟಿಸಿದ ಅಂಕಿತಾ ಎಂಬ ವಿದ್ಯಾರ್ಥಿನಿ ಓದಿ ಸಾಧನೆ ಮಾಡಿದ್ದು ಸರ್ಕಾರಿ ಶಾಲೆ ಎಂಬುದನ್ನು ನಾವು ಯಾರು ಕೂಡ ಮರೆಯಬಾರದು,

ಇಂತಹ ಗುಣಮಟ್ಟದ ಶಿಕ್ಷಣಕ್ಕೆ ಮತ್ತೊಂದು ಸಾಕ್ಷಿ ಬೇಕಾ ಎಂದು ತಿಳಿಸಿದರು.

ಹಾಗಾಗಿ ಎಲ್ಲ ಪೋಷಕರು ನಿಮ್ಮ ಎಲ್ಲಾ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲು ಮಾಡಬೇಕು ಎಂದು ಶಾಲೆಯ ಮುಖ್ಯ ಶಿಕ್ಷಕರು ಆದ ಶ್ರೀಮತಿ ಸುಜಾತ ರವರು ಪೋಷಕರಿಗೆ ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ಎಸ್.ಡಿ.ಎಮ್.ಸಿ ಅಧ್ಯಕ್ಷರಾದ ಶ್ರೀ ಮಹೇಶ್.ವೈ. ಸದಸ್ಯರಾದ ಕೃಷ್ಣನಾಯ್ಕ , ಭಾಗ್ಯಮ್ಮ , ಶಕುಂತಲಾ , ರಹಮತ್ ಉನ್ನಿಸಾ , ಶಾಲೆಯ ಮುಖ್ಯಶಿಕ್ಷಕರಾದ ಶ್ರೀಮತಿ ಸುಜಾತ, ಸಹ ಶಿಕ್ಷಕರಾದ ಗೀತಾ , ರೇಣುಕಮ್ಮ , ಉಷಾರಾಣಿ , ಹೇಮಲತಾ , ರಾಧ , ಹಾಗೂ ಪೋಷಕರು ಭಾಗವಹಿಸಿದ್ದರು.

**ವರದಿ: ಕೋಡಿಹಳ್ಳಿ.ಶಿವಮೂರ್ತಿ.ಟಿ. ಚಿತ್ರದುರ್ಗ.**

## ಡಿ.ಎಸ್.ಎಸ್ ಬೆಳಗಾವಿ ವಿಭಾಗೀಯ ಸಂಚಾಲಕರಾಗಿ ಹನಮಂತ ಎಚ್.ಹೀರೆಮನಿ ಆಯ್ಕೆ



**ಹುನಗುಂದ :** ಕರ್ನಾಟಕ ದಲಿತ ಸಂಘರ್ಷ ಸಮಿತಿ ಮಹಾತ್ಮ ಪ್ರೊ‌ಟಟ ಬಿ. ಕೃಷ್ಣಪ್ಪ ಸ್ಥಾಪಿತ ರಿ.ನಂ–386/2020–21 ಬಾಗಲಕೋಟೆ ಜಿಲ್ಲಾ ಸಮಿತಿಯ ಜಿಲ್ಲಾ ಸಂಘಟನಾ ಸಂಚಾಲಕರಾದ ಹನಮಂತ ಎಚ್.ಹೀರೆಮನಿ ಇವರ ಕ್ರಿಯಾಶೀಲತೆ, ಕಾರ್ಯ ಚಟುವಟಿಕೆಯನ್ನು ಗುರುತಿಸಿ ಇವರನ್ನು ಬೆಳಗಾವಿ ವಿಭಾಗೀಯ ಸಂಚಾಲಕರನ್ನಾಗಿ ಆಯ್ಕೆ ಮಾಡಿದೆ ಎಂದು ರಾಜ್ಯ ಸಂಘಟನಾ ಸಂಚಾಲಕರು ಮಾರುತಿ ಬಿ. ಹೊಸಮನಿ ತಿಳಿಸಿದ್ದಾರೆ.

ಬೆಳಗಾವಿ ವಿಭಾಗೀಯ ಮಟ್ಟದಲ್ಲಿ ಬರುವ ಎಲ್ಲಾ ಜಿಲ್ಲೆಗಳಿಗೆ ಶೀಘ್ರವಾಗಿ ಸಂಚಾರ ಕೈಗೊಂಡು ಜಿಲ್ಲಾ ಪದಾಧಿಕಾರಿಗಳ ಆಯ್ಕೆ ಮಾಡಲು ಕಾರ್ಯ ಪ್ರವೃತ್ತರಾಗುವಂತೆ ಸೂಚಿಸಿ ಆಯ್ಕೆ ಮಾಡಿ ಆದೇಶಿಸಿ ಪತ್ರಿಕಾ ಪ್ರಕಟಣೆಗೆ ತಿಳಿಸಿದೆ.

## ಫ್ಯಾಶನ್ ಡಿಸೈನ್ ಪದವಿ ಕೋರ್ಸುಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** ಬಳ್ಳಾರಿಯ ಜಿ.ಆರ್.ಟಿ.ಡಿ.ಸಿ ಸಂಸ್ಥೆಯಲ್ಲಿನ ಬಿ.ಎಸ್‌ಸಿ ಪ್ರಥಮ ವರ್ಷದ ಫ್ಯಾಶನ್ ಡಿಸೈನ್ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 2024–25ನೇ ಶೈಕ್ಷಣಿಕ ವರ್ಷದ ಪ್ರಥಮ ಬಿ.ಎಸ್‌ಸಿ(ಗಾರ್ಮೆಂಟ್ಸ್ ಮ್ಯಾನುಫ್ಯಾಕ್ಚರಿಂಗ್ ಟೆಕ್ನಾಲಜಿ) ವೃತ್ತಿಪರ ಪದವಿ ಕೋರ್ಸ್ ಪ್ರವೇಶಾತಿಗಾಗಿ ಯಾವುದೇ ಪಿ.ಯು.ಸಿ(ಕಲೆ, ವಾಣಿಜ್ಯ, ವಿಜ್ಞಾನ, ಶಿಕ್ಷಣ ಮತ್ತು ಯಾವುದೇ ಡಿಪ್ಲೊಮಾ) ವಿಭಾಗದಲ್ಲಿ ತೇರ್ಗಡೆ ಹೊಂದಿರುವ ಆಸಕ್ತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ನಮೂನೆ ಹಾಗೂ ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಪ್ರಾಂಶುಪಾಲರು, ಜಿ.ಆರ್.ಟಿ.ಡಿ.ಸಿ ಕಾಲೇಜ್, ಜಿಲ್ಲಾ ಕ್ರೀಡಾಂಗಣ ಮೈದಾನ ರಸ್ತೆ, ಮೊದಲನೇ ರೈಲ್ವೇ ಗೇಟ್ ಹತ್ತಿರ, ನಲ್ಲಚೆರವು, ಬಳ್ಳಾರಿ ಇವರಿಗೆ ಮೇ 30 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗಾಗಿ ಮೊಬೈಲ್ ಸಂಖ್ಯೆ : 9741264655 ಗೆ ಸಂಪರ್ಕಿಸಬಹುದು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಕೃಷಿ ಕೋಟಾದಡಿಯಲ್ಲಿ: ಕೃಷಿಕರ ಮಕ್ಕಳಿಗೆ ಪ್ರಾಯೋಗಿಕ ಪರೀಕ್ಷೆ



**ಬಾಗಲಕೋಟೆ :** ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಹಾಗೂ ವಿಶ್ವವಿದ್ಯಾಲಯದ ಆದೇಶದನ್ವಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ ಮುಖ್ಯ ಆವರಣದಲ್ಲಿರುವ ಒಳಾಂಗಣ ಕ್ರೀಡಾಂಗಣ ಸಮುಚ್ಚಯದಲ್ಲಿ ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟ ವತಿಯಿಂದ ದಿನಾಂಕ:25.05.2024 ರಂದು ಕೃಷಿಕರ ಕೋಟಾದಡಿಯಲ್ಲಿ ಕೃಷಿಕರ ಮಕ್ಕಳಿಗಾಗಿ ಸನ್ 2024–25 ನೇ ಸಾಲಿನಲ್ಲಿ ಸ್ನಾತಕ ಪದವಿಗೆ ಪ್ರವೇಶ ನೀಡಲು ಪ್ರಾಯೋಗಿಕ ಪರೀಕ್ಷೆಯನ್ನು ಯಶಸ್ವಿಯಾಗಿ ಜರುಗಿಸಲಾಯಿತು. ಡಾ. ಬಾಲಾಜಿ ಕುಲಕರ್ಣಿ, ಡೀನ್ ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟ ಜಿಲ್ಲೆಯ ವಿವಿಧ ಇಲಾಖೆಗಳ ಮುಖ್ಯಸ್ಥರಾದ ಜಂಟಿ ಕೃಷಿ ನಿರ್ದೇಶಕರು, ಉಪ ನಿರ್ದೇಶಕರು, ತೋಟಗಾರಿಕೆ ಹಾಗೂ ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಅಧಿಕಾರಿಗಳವರ ನೇತೃತ್ವದಲ್ಲಿ ಮತ್ತು ಮಹಾವಿದ್ಯಾಲಯದ ವಿವಿಧ ವಿಭಾಗಗಳ ಮುಖ್ಯಸ್ಥರು, ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಿ, ಒಟ್ಟು ಮೂರು ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಒಟ್ಟು 922 ವಿದ್ಯಾರ್ಥಿಗಳು ಸ್ನಾತಕ ಪದವಿಗೆ ಕೃಷಿಕರ ಕೋಟಾದಡಿಯಲ್ಲಿ ಪ್ರವೇಶ ಪಡೆಯಲು ನೋಂದಣಿಮಾಡಿಕೊಂಡಿದ್ದು, ಸುಮರು 904 ವಿದ್ಯಾರ್ಥಿಗಳು ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಿದ್ದರು.

ಅರ್ಹ ಅಭ್ಯರ್ಥಿ (ವಿದ್ಯಾರ್ಥಿ) ಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಏಇಂ) ದ ಆದೇಶದಂತೆ ಪ್ರಾಯೋಗಿಕ ಪರೀಕ್ಷೆಯನ್ನು ಬೆಳಗ್ಗೆ 9.00 ಗಂಟೆಯಿಂದ ಪ್ರಾರಂಭಿಸಲಾಯಿತು. ಒಟ್ಟು 50 ಬಗೆಯ ಮಾದರಿಗಳಿಗೆ (ಅದರಲ್ಲಿ 20– ಕೃಷಿ ಮತ್ತು ಸಂಬಂಧಿತ ವಿಷಯಗಳು, 10– ತೋಟಗಾರಿಕೆ ಮತ್ತು ಸಂಬಂಧಿತ ವಿಷಯಗಳು, 5– ಅರಣ್ಯ ಮತ್ತು ಸಂಬಂಧಿತ ವಿಷಯಗಳು, 15– ಪಶುಸಂಗೋಪನೆ ಮತ್ತು ಸಂಬಂಧಿತ ವಿಷಯಗಳು) ಒಟ್ಟು 200 ಅಂಕಗಳಿಗೆ (ಪ್ರತಿ ಮಾದರಿಗೆ 04 ಅಂಕಗಳು) ಪರೀಕ್ಷೆ ನಡೆಸಲಾಯಿತು.

ಪರೀಕ್ಷಾ ಕೇಂದ್ರಕ್ಕೆ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಡಾ. ವಿಷ್ಣುವರ್ಧನ ರವರು ಭೇಟಿ ನೀಡಿ ಪರೀಕ್ಷೆ ಬರೆದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರೊಂದಿಗೆ ಸಂವಾದವನ್ನು ಕೈಗೊಂಡು ಪರೀಕ್ಷಾ ವ್ಯವಸ್ಥೆಯನ್ನು ವೀಕ್ಷಿಸಿ ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟೆ ವತಿಯಿಂದ ಕೃಷಿ ಕೋಟಾದಡಿಯಲ್ಲಿ ಪ್ರವೇಶ ಪಡೆಯುವ ರೈತರ ಮಕ್ಕಳಿಗೆ ಪ್ರಾಯೋಗಿಕ ಪರೀಕ್ಷೆಯನ್ನು ಅಚ್ಚುಕಟ್ಟಾಗಿ ವ್ಯವಸ್ಥೆಗೊಂಡು ಯಶಸ್ವಿಗೊಳಿಸಿರುವ ಪ್ರಯುಕ್ತ ಶ್ಲಾಘಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಶಿಕ್ಷಣ ನಿರ್ದೇಶಕರಾದ ಡಾ. ಎನ್.ಕೆ ಹೆಗಡೆ ರವರು, ಪರೀಕ್ಷೆಯ ಮೇಲ್ವಿಚಾರಕರು ಹಾಗೂ ಸಂಶೋಧನಾ ನಿರ್ದೇಶಕರಾದ ಡಾ. ಹೆಚ್.ಪಿ. ಮಹೇಶ್ವರಪ್ಪ, ಆಸ್ತಿ ಅಧಿಕಾರಿಗಳಾದ ಶ್ರೀ. ವಿಜಯಭಾಸ್ಕರ ಎಮ್. ಭಜಂತ್ರಿ, ಡಾ. ಈ ರಾಜಶೇಖರ, ಬಾಹ್ಯ ಪರೀಕ್ಷಾ ನಿಯಂತ್ರಣಾಧಿಕಾರಿಗಳು ಹಾಗೂ ವಿಶ್ವವಿದ್ಯಾಲಯದ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮಹಾವಿದ್ಯಾಲಯದ ವಿವಿಧ ವಿಭಾಗಗಳ ಮುಖ್ಯಸ್ಥರುಗಳಾದ ಡಾ. ರವಿಂದ್ರ ಜಾವಡಗಿ, ಡಾ. ಸಿ.ಬಿ. ಕೌಜಲಗಿ, ಡಾ. ಆಯ್. ಬಿ. ಬಿರಾದಾರ, ಡಾ. ಪ್ರಭುಲಿಂಗ ಜಿ., ಡಾ. ಬಸವರಾಜಪ್ಪ ಎಂ.ಪಿ., ಡಾ. ಭುವನೇಶ್ವರಿ ಜಿ., ಡಾ. ಎಸ್. ಎನ್. ಪಾಟೀಲ ಹಾಗೂ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಗಳು ಹಾಗೂ ಕಾರ್ಮಿಕರು ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಿ ಪ್ರಾಯೋಗಿಕ ಪರೀಕ್ಷೆಯನ್ನು ಯಶಸ್ವಿಗೊಳಿಸಲು ಕಾರಣೀಕರ್ತರಾದರು.

# ವಿದೇಶದಲ್ಲಿ ಮಹೇಶ ಬಡಿಗೇರರ ಕಲಾಕೃತಿ ಪ್ರದರ್ಶನ





**ಬಾದಾಮಿ :** ಮೇ 16 ರಿಂದ ಜೂ. 6 ವರೆಗೆ ಅಂತರಾಷ್ಟ್ರೀಯ ಸಮೂಹ ಚಿತ್ರಕಲಾ ಪ್ರದರ್ಶನವನ್ನು ರಿಪಬ್ಲಿಕ್ ಡೊಮಿನಿಕನ್ ದೇಶದ ಸ್ಯಾಂಟೋ ಡೋಮಿಂಗೊ ನಗರದಲ್ಲಿ ಸೀಲೂ ಆರ್ಟ್ ಫೌಂಡೇಶನ್‌ವತಿಯಿಂದ ಆಯೋಜಿಸಲಾಗಿದೆ. ಈ ಪ್ರದರ್ಶನಕ್ಕಾಗಿ ವಿಶ್ವದ 39 ವಿವಿಧ ದೇಶದ ಕಲಾವಿದರನ್ನು ಆಯ್ಕೆ ಮಾಡಿ ಅವರ ಕಲಾಕೃತಿಗಳ ಪ್ರದರ್ಶನವನ್ನು ನಡೆಸಲಾಗುತ್ತಿದೆ. ಇದರಲ್ಲಿ ನಮ್ಮ ನಾಡಿನ ಯುವ ಕಲಾವಿದ ಮಹೇಶ ಮನೋಹರ ಬಡಿಗೇರ ಅವರು ರಚಿಸಿದ ಚಿತ್ರ ಕಲಾಕೃತಿಯು ಆಯ್ಕೆಯಾಗಿರುವುದು ನಮ್ಮ ನಾಡಿಗೆ ಹಾಗೂ ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಬದಾಮಿ ಕೇಂದ್ರ–ಬನಶಂಕರಿ ವಿಭಾಗಕ್ಕೆ ಹೆಮ್ಮೆಯ ಸಂಗತಿಯಾಗಿದೆ.

ಕಲಾವಿದರ ಸಂಕ್ಷಿಪ್ತ ಪರಿಚಯ: ಬಾಗಲಕೋಟ ಜಿಲ್ಲೆಯ ಬಾದಾಮಿ ತಾಲೂಕಿನ ಬೂದಿಹಾಳ (ಎಸ್.ಜೆ) ಗ್ರಾಮದಲ್ಲಿ ಅಕ್ಟೋಬರ್ 8 1996 ರಂದು ಮನೋಹರ ಹಾಗೂ ಶಕುಂತಲಾ ಎಂಬ ದಂಪತಿಗಳಿಗೆ ಎರಡನೆಯ ಮಗನಾಗಿ ಮಹೇಶ ಬಡಿಗೇರ ಅವರು ಜನಿಸಿ. ಪ್ರಾಥಮಿಕ ಶಿಕ್ಷಣವನ್ನು ತಮ್ಮ ಸ್ವಗ್ರಾಮದಲ್ಲಿ, ಮಾಧ್ಯಮಿಕ ಶಿಕ್ಷಣವನ್ನು ಕಾತರಕಿ ಹಾಗೂ ಪ್ರೌಢ ಶಾಲಾ ಶಿಕ್ಷಣವನ್ನು ಹುಬ್ಬಳ್ಳಿಯಲ್ಲಿ ಪಡೆದಿದ್ದಾರೆ. ಬಾಲ್ಯದಿಂದಲೆ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿರುವುದರಿಂದ ಇವರ ಮುಂದಿನ ಶಿಕ್ಷಣವನ್ನು ಕಲಾ ಕ್ಷೇತ್ರದಲ್ಲಿ ಆರಂಭಿಸುವ ಉದ್ದೇಶದಿಂದ ಕನ್ನಡ ವಿಶ್ವವಿದ್ಯಾಲಯದ ಬಾದಾಮಿ ಕೇಂದ್ರದ– ಬನಶಂಕರಿಯಲ್ಲಿ ಬಿ.ವಿ.ಎ ಚಿತ್ರಕಲೆಗೆ ಪ್ರವೇಶವನ್ನು ಪಡೆಯುತ್ತಾರೆ. ಇಲ್ಲಿಯ ಅಧ್ಯಾಪಕರು ಸಾಂಪ್ರದಾಯಕ ಕಲೆಯ ಜೊತೆಗೆ ಸೃಜನಾತ್ಮಕ ಸಂಯೋಜನಾ ಕಲೆಯ ವಿವಿಧ ರೂಪಗಳಲ್ಲಿ ಕಲಾಕೃತಿಗಳ ಮಾರ್ಗದರ್ಶನ ಇವರಿಗೆ ದೊರೆಯಿತು.

ಕಲೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ ಈ ಯುವ ಕಲಾವಿದ ಬನಶಂಕರಿ ಚಿತ್ರಕಲೆ ಕಲಾಶಾಲೆಯಲ್ಲಿ ಬಿ.ವಿ.ಎ ಸ್ನಾತಕ ಪದವಿ ಹಂತದಲ್ಲಿ ಇರುವಾಗಲೇ ಇವರು ರಚಿಸಿದ ಅನೇಕ ಕಲಾಕೃತಿಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಕಲಾ ಪ್ರದರ್ಶನಕ್ಕೆ ಆಯ್ಕೆಯಾಗಿ ಎಲ್ಲರ ಗಮನವನ್ನು ಸೆಳೆದಿವೆ. ಮುಂದೆ ಇವರು ಉನ್ನತವಾದ ಕಲಾ ಶಿಕ್ಷಣವನ್ನು ಪಡೆಯಲು ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾವಿಭಾಗಕ್ಕೆ2021ರಲ್ಲಿಪ್ರವೇಶವನ್ನು ಪಡೆದರು.

ಅಧ್ಯಾಪಕರಿಂದ ಸಮಕಾಲಿನ ಸೃಜನಾತ್ಮಕವಾದ ಕಲಾ ಬೋಧನೆಯ ಶಿಕ್ಷಣವು ಈ ಕಲಾವಿದರಿಗೆ ಲಭಿಸಿದ್ದು. ಸತತ ಪ್ರಯತ್ನದ ಫಲವಾಗಿ ಮಹೇಶ ಬಡಿಗೇರ ಅವರಿಗೆ ತನ್ನ ಕಲಾಕೃತಿ ರಚನೆಗೆ ವಿಭಿನ್ನವಾದ ದಿಕ್ಕನ್ನು ತಾವೇ ಕಂಡುಕೊಂಡಿದ್ದಾರೆ. ಈ ರೀತಿಯಾಗಿ ತಮ್ಮ ಸ್ವಂತ ಶೈಲಿಯಲ್ಲಿ ಹಲವಾರು ಕೃತಿಗಳನ್ನು ರಚಿಸಿ ರಾಜ್ಯದ ವಿವಿಧ ಸ್ಥಳಗಳಲ್ಲಿನ ಕಲಾ ಗ್ಯಾಲರಿಯಲ್ಲಿ ವಿಶೇಷ ಸಂದರ್ಭಗಳಲ್ಲಿ ಪ್ರದರ್ಶನವನ್ನು ಮಾಡುತ್ತಾ ಬಂದಿದ್ದಾರೆ. ಮುಂದೆ ಇವರ ಕಲಾಕೃತಿಗಳು ರಾಜ್ಯ ವ್ಯಾಪ್ತಿ ಮತ್ತು ದೇಶದಿಂದ ವಿದೇಶಗಳ ಗಡಿಭಾಗವನ್ನು ಸಲಿಸಾಗಿ ತಲುಪಿದವು. ಟರ್ಕಿ, ಅಮೇರಿಕಾ, ಮೆಕ್ಸಿಕೋ, ಉಕ್ರೇನ್, ಅರ್ಜೆಂಟೈನಾ, ಸ್ಪೇನ್, ಬ್ರೇಜಿಲ್ ದೇಶಗಳಲ್ಲಿ ಕಲಾಕೃತಿಗಳು ಪ್ರದರ್ಶನಗೊಂಡು ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅಲ್ಲದೆ ವಿಶೇಷವಾಗಿ ಮಹಿಳೆಯರು ಬಳಸುವ ವೆನಿಟಿ ಬ್ಯಾಗ್, ಟೀ–ಶರ್ಟ್ ವಸ್ತ್ರವಿನ್ಯಾಸ ಹಾಗೂ ಪುಸ್ತಕಗಳಲ್ಲಿ ಇವರ ಕಲಾಕೃತಿಗಳು ಮುದ್ರಣವಾಗಿವೆ. ಇನ್ನೊಂದು ವಿಶೇಷವೆಂದರೆ ಮೇ 10 ರಿಂದ 30 ವರೆಗೆ ಟರ್ಕಿ ದೇಶದಲ್ಲಿಇವರ ಗುಂಪು ಕಲಾ ಪ್ರದರ್ಶನ ನಡೆದಿರುವುದು ಪ್ರಶಂಸನಿಯ. ಇಂತಹ ಸೃಜನಶೀಲ ಕಲಾವಿದರ ಪ್ರಸ್ತುತ ಕಲಾಕೃತಿಯು ರಿಪಬ್ಲಿಕ್ ಡೊಮಿನಿಕನ್ ದೇಶದಲ್ಲಿ ನಡೆದ ಪ್ರದರ್ಶನಕ್ಕೆ ಆಯ್ಕೆಯಾಗಿದ್ದು ತುಂಬಾ ಹೆಮ್ಮೆಯ ಸಂಗತಿಯಾಗಿದೆ.

ಕೃತಿಗಳ ವಸ್ತು–ವಿಷಯ: ಸಾಮಾನ್ಯವಾಗಿ ಇವರಕೃತಿಯಲ್ಲಿನಿಸರ್ಗದಲ್ಲಿಕಂಡುಬರುವ ಪ್ರಾಣಿ, ಪಕ್ಷಿಗಳನ್ನೇ ವಸ್ತು ವಿಷಯಗಳಾಗಿವೆ. ಇವುಗಳನ್ನೆ ತಮ್ಮ ಕೃತಿಗಳಲ್ಲಿ ವಿಶಿಷ್ಟವಾದ ಶೈಲಿಯಿಂದ ನಿರೂಪಿಸುತ್ತಾರೆ. ಮಹಿಳೆ, ವನ್ಯಜೀವಿ, ಜಲ–ಚರಗಳು, ಪಕ್ಷಿಗಳು ಸಂಯೋಜನೆಯ ಜೊತೆಗೆ ಗಾಢವಾದ ವರ್ಣಗಳು ಕಂಡುಬರುತ್ತವೆ. ಈ ಎಲ್ಲಾ ಅಂಶಗಳ ಜೊತೆಗೆ ತನ್ನತನವನ್ನು ಬೇರಸಿಕೊಂಡು ಸ–ಹೃದಯಿಗಳಿಗೆ ವಿಭಿನ್ನ ನೋಟವನ್ನು ಈ ಕಲಾಕೃತಿಗಳು ನೀಡುವ ಕಾರಣಕ್ಕೆ ಸಧ್ಯ ಆಯ್ಕೆಯಾದ ಕೃತಿಯು ಈ ಎಲ್ಲಾ ಅಂಶಗಳಿಂದ ಉತ್ಕೃಷ್ಟವಾದ ನೋಟವನ್ನು ಆಯ್ಕೆಗಾರರ ಮನವನ್ನು ಮುಟ್ಟಿದೆ. ಇವರ ಈ ಸಾಧನೆಗೆ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ,

ಕುಲಸಚಿವ ಡಾ ವಿಜಯ್ ಪೂಣಚ್ಚ ತಂಬಂಡ, ಹಾಗೂ ಬಾದಾಮಿ ಕೇಂದ್ರದ ಮುಖ್ಯಸ್ಥರು, ಅಧ್ಯಾಪಕರು ಮತ್ತು ಸಿಬ್ಬಂದಿ ವರ್ಗದವರು ಈ ಯುವ ಕಲಾವಿದನ ಕೃತಿಯು ಆಯ್ಕೆಗೊಂಡಿದಕ್ಕೆ ತುಂಬು ಹೃದಯದ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

# ಬಿ.ಎಂ.ಹೊರಕೇರಿ ಸಂಸ್ಕರಣ ಗ್ರಂಥಕ್ಕೆ ಬರಹ ಲೇಖನ ಕವನ ಆಹ್ವಾನ


**ಬಾದಾಮಿ :** ಮಾಜಿ ಶಾಸಕ ದಿಂ. ಬಿ.ಎಂ.ಹೊರಕೇರಿ ಅವರ ಸಂಸ್ಮರಣ ಗ್ರಂಥವನ್ನು ಹೊರತರಲಾಗುತ್ತಿದ್ದು, ಗ್ರಂಥಕ್ಕೆ ಹೊರಕೇರಿಯವರ ಕುರಿತು ಬರಹ, ಲೇಖನ, ಕವಿತೆಗಳನ್ನು ಆಹ್ವಾನಿಸಲಾಗಿದೆ.

ರೈತರ ಪಾಲಿನ ಸಂಜೀವಿನಿಯಂತೆ ಕಾರ್ಯಗೈದ ಧೀಮಂತ ರಾಜಕಾರಣಿ ಬಿ.ಎಂ.ಹೊರಕೇರಿ ಅವರ ಮೂರ್ತಿಯನ್ನು ತಾಲೂಕಿನ ಬೇಲೂರ–ಾಲಿಹಾಳ ಕ್ರಾಸ್‌ನಲ್ಲಿ ಅನಾವರಣಗೊಳ್ಳುವ ನಿಮಿತ್ಯ ಅವರ ಮಹಾದಾಯಿ ಹುಟ್ಟಿನ ಮಾಸದ ನೆನಪು ಸದಾ ಹಸಿರಾಗಿ ಉಳಿಯುವ ಸದುದ್ದೇಶದಿಂದ ಗ್ರಂಥ ಶಾಸ್ತ್ರೀಯ ನೆಲೆಯಲ್ಲಿ, ಹೊರಕೇರಿಯವರ ವ್ಯಕ್ತಿತ್ವಕ್ಕೆ ಮೆರಗು ತರುವ ನೆಲೆಯಲ್ಲಿ ಪ್ರಧಾನ ಸಂಪಾದಕ ಡಾ.ವಿ.ಬಿ.ಸಣ್ಣಸಕ್ಕರಗೌಡರ



(9901510259) ಹಾಗೂ ಸಂಪಾದಕರಾಗಿ ಆರ್.ವಿ.ಗೌಡಪ್ಪಗೌಡ್ರ (ಮೊ: 9844909089) ಅವರುಗಳು "ಹೊನ್ನಬಿತ್ಯಾರ ಹೊರಕೇರಿ" ಎಂಬ ಬಿ.ಎಂ. ಹೊರಕೇರಿ ಇವರ ಸಂಸ್ಮರಣ ಗ್ರಂಥದ ಬೆಲೆಯುಳ್ಳ ಕಾರ್ಯ ನಿರ್ವಹಿಸಲಿದ್ದಾರೆ. ಆಸಕ್ತರು ಬಿ.ಎಂ.ಹೊರಕೇರಿ ಅವರನ್ನು ಕುರಿತು ಶುಭನುಡಿ, ಲೇಖನ, ಅನಿಸಿಕೆಗಳು, ಅವರ ಜೀವನಕ್ಕೆ ಸಂಬಂಧಿಸಿದ ಬರಹಗಳನ್ನು ಮತ್ತು ಕವನಗಳನ್ನು ರಚಿಸಿ ಸಂಪಾದಕರುಗಳ ಇ–ಮೇಲ್ (rvgoudappagoudr@gmail.com) ಅಥವಾ (venkanagouda259@gmail.com) ಇಲ್ಲಿಗೆ ಕಳುಹಿಸಬೇಕು ಎಂದು ಶ್ರೀ ಬಿ.ಎಂ.ಹೊರಕೇರಿ ಅವರ ಸಂಸ್ಕರಣ ಗ್ರಂಥ ಸಮಿತಿಯ ಅಧ್ಯಕ್ಷ ಪಿ.ಆರ್. ಗೌಡರ ಹಾಗೂ ಪ್ರಧಾನ ಕಾರ್ಯದರ್ಶಿ ಎಂ.ಡಿ.ಯಲಿಗಾರ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚನ್ನಬಸವ ಶಿರೋಳ ನಿಧನ



**ಮಹಾಲಿಂಗಪುರ :** ಪಟ್ಟಣದ ಜವಳಿ ಬಜಾರ್ ನಿವಾಸಿ, ಕುರುಹಿನಶೆಟ್ಟಿ ಸಮಾಜದ ಮುಖಂಡ ಚನ್ನಬಸವ ಚೆನ್ನಪ್ಪ ಶಿರೋಳ (72) ನಿಧನರಾದರು. ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಸಂಭ್ರಮದ ಜೋಡೆತ್ತಿನ ಗಾಡಿ ಸ್ಪರ್ಧೆ



**ಮಹಾಲಿಂಗಪುರ :** ಸಮೀಪದ ಬಿಸನಾಳ ಗ್ರಾಮದಲ್ಲಿ ಬನ್ನೆಮ್ಮದೇವಿ ರಥೋತ್ಸವ ಮತ್ತು ಮಾರುತೇಶ್ವರ ಓಕುಳಿ ಅಂಗವಾಗಿ ಮಾರುತೇಶ್ವರ ಟ್ರಸ್ಟ್‌ಕಮಿಟಿ ವತಿಯಿಂದ ಹಮ್ಮಿಕೊಂಡ ಜೋಡೆತ್ತಿನಗಾಡಿ ಸ್ಪರ್ಧೆ ರೋಮಾಂಚನ ಮೂಡಿಸಿತು.

ಫ್ಯಾಕ್ಟರಿ ಮೈದಾನದಲ್ಲಿ ನಡೆದ ಸ್ಪರ್ಧೆಯಲ್ಲಿ ವಿವಿಧ ಭಾಗಗಳಿಂದ ಆಗಮಿಸಿದ 20 ಜೋಡೆತ್ತುಗಳು ಭಾಗವಹಿಸಿದ್ದವು. ಸ್ಪರ್ಧೆಯಲ್ಲಿ ಭಾಗಿಯಾಗಿದ್ದ ರೈತರು ಹವ್ಯಾಸಿ ಸ್ಪರ್ಧಾಳುಗಳಂತೆ ಅವರ ಜೋಡೆತ್ತಿನ ಗಾಡಿಯನ್ನು ವೇಗವಾಗಿ ಓಡಿಸಿದರು. ಅವರ ಜೋಡೆತ್ತುಗಳು ಶಕ್ತಿ ಪ್ರದರ್ಶಿಸಿ ಸೈ ಎನಿಸಿಕೊಂಡವು.ಸ್ಪರ್ಧೆಗೆ ನಿಗದಿಪಡಿಸಿದ ಒಂದು ನಿಮಿಷದ ಅವಧಿಯಲ್ಲಿ ಗರಿಷ್ಠ ದೂರಕ್ರಮಿಸಲು ಪರಸ್ಪರ ಪೈಪೋಟಿ ನಡೆಸಿದವು.ಅಕ್ಕಪಕ್ಕ ನೆರೆದಿದ್ದ ಜನಸ್ತೋಮ ಶಿಳ್ಳೆ, ಕೇಕೆ ಹಾಕಿ ರೈತರಿಗೆ ಹುಮ್ಮಸ್ಸು ನೀಡಿದರು. ಇದಕ್ಕೂ ಮುನ್ನ ನಡೆದ ಕಾರ್ಯಕ್ರಮದಲ್ಲಿ ಜೋಡೆತ್ತು ಸ್ಪರ್ಧೆಗೆ ಚಾಲನೆ ನೀಡಲಾಯಿತು.ಮಹಾಂತೇಶ ಹಿಟ್ಟಿನಮಠ, ಮಹಾಲಿಂಗಪ್ಪ ಸನದಿ, ಪ್ರಕಾಶ ಚನ್ನಾಳ, ಅಶೋಕ ತಳವಾರ, ಹಣಮಂತ ಮೋಪಗಾರ, ಮಾರುತಿ ಕರೋಶಿ, ಬಸವರಾಜ ಶಿರೋಳ, ಮಹಾಲಿಂಗ ಶಿರೋಳ, ಬಸವರಾಜ ಮರನೂರ, ವಿಜಯ ಭಸ್ಮೆ, ಮಹಾಲಿಂಗ ನಾಯಕ, ಮಲ್ಲಪ್ಪ ಭದ್ರಶೆಟ್ಟಿ, ಬಸವರಾಜ ತೇಲಿ ಸೇರಿದಂತೆ ಹಲವರು ಇದ್ದರು.

# ಸಾಧಕ ವಿದ್ಯಾರ್ಥಿಗೆ ಸನ್ಮಾನ



**ಮಹಾಲಿಂಗಪುರ :** ಪಟ್ಟಣದ ಮಾತೃಭೂಮಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ ದ್ವಿತೀಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಿಯುಸಿಯಲ್ಲಿ 98.33 ಅಂಕಗಳೊಂದಿಗೆ ರಾಜ್ಯಕ್ಕೆ 9ನೇ ರ್‍ಯಾಂಕ್ ಪಡೆದ ಸ್ಥಳೀಯ ಬುದ್ನಿಪಿಡಿ ಬಡಾವಣೆಯ ನಂದನ ಮಲ್ಲಾಪೂರ ಹಾಗೂ ತಾಯಿ ನಾಗವೇಣಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಹಕಾರಿ ಸಂಘದ ಅಧ್ಯಕ್ಷ ಮಂಜುನಾಥ ಪತ್ತಾರ, ಉಪಾಧ್ಯಕ್ಷ ಸಿದ್ದಪ್ಪ ತಳವಾರ, ರಾಮಲಿಂಗ ತಳವಾರ, ಸಲೀಂ ಸರಕಾವಸ, ಸದಾಶಿವ ಸಣಕಲ್, ಸುನೀಲ ಅಂಬಿ, ಬಸವರಾಜ ಸತ್ತಿಗೇರಿ, ಪ್ರಕಾಶ ಅಮ್ಮಣಗಿ, ಅಪ್ರೇಕ್ ಸೌದಾಗರ, ಯಾಸೀನ ಶೇಖ, ತೌಫೀಕ ಬಾಗವಾನ ಸೇರಿದಂತೆ ಹಲವರು ಇದ್ದರು.

# ಕಾಯಕ ನಿಷ್ಠೆಯಿಂದ ಬದುಕು ಸಮತೋಲನ: ಭಾಲ್ಕಿ ಶ್ರೀಗಳು



**ಜಮಖಂಡಿ :** ದುಡಿಮೆ ಮನುಷ್ಯನಿಗೆ ಸ್ವಾಭಿಮಾನ, ಆತ್ಮವಿಶ್ವಾಸ ಮತ್ತು ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ಕಾಯಕ ನಿಷ್ಠೆ ಬದುಕನ್ನು ಸಮತೋಲನದಲ್ಲಿ ಇಡುತ್ತದೆ. ದಾಸೋಹ ಮಾಡುವ ಅವಕಾಶ ಕಾಯಕದಿಂದಲೇ ಲಭಿಸುತ್ತದೆ ಎಂದು ಭಾಲ್ಕಿಯ ಹಿರೇಮಠ ಸಂಸ್ಥಾನದ ಮಹಾಲಿಂಗ ಮಹಾಸ್ವಾಮಿಗಳು ಹೇಳಿದರು.

ತಾಲ್ಲೂಕಿನ ಹಲ್ಯಾಳ ಗ್ರಾಮದ ಶ್ರೀಗುರುದೇವಾಶ್ರಮದಲ್ಲಿ ಶ್ರೀಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ತಿಂಗಳ ನಾಲ್ಕನೇ ಭಾನುವಾರದ ಸಂಜೆ ಹಮ್ಮಿಕೊಂಡಿದ್ದ ಮಾಸಿಕ ಕಾರ್ಯಕ್ರಮ 'ಶ್ರೀಗುರುದೇವ ಸತ್ಸಂಗ'ದ ಸಾನ್ನಿಧ್ಯ ವಹಿಸಿ ಅವರು 'ಕಾಯಕ ಮತ್ತು ದಾಸೋಹ' ಕುರಿತು ಅನುಭಾವ ಹಂಚಿಕೊಂಡರು.

ಸಂಪತ್ತು ಒಂದೆಡೆ ಕೇಂದ್ರೀಕೃತವಾದರೆ ಸಮಾಜದಲ್ಲಿ ಎಲ್ಲ ಬಗೆಯ ಅಸಮಾನತೆ ಹುಟ್ಟುತ್ತವೆ. ಕಾಯಕ ಸಾರ್ಥಕವಾಗುವುದೇ ದಾಸೋಹದಿಂದ. ಸಮಸಮಾಜ ನಿರ್ಮಾಣಕ್ಕೆ ದಾಸೋಹ ಅಗತ್ಯ. ಕಾಯಕ ಮತ್ತು ದಾಸೋಹ ಒಂದೇ ನಾಣ್ಯದ ಎರಡು ಮುಖಗಳು ಎಂದರು.

ಭಾಲ್ಕಿಯ ಹಿರೇಮಠ ಸಂಸ್ಥಾನದ ಬಸವಲಿಂಗ ದೇವರು ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಶಿಷ್ಯನ ಆಧ್ಯಾತ್ಮಿಕ ಸಾಧನೆಗೆ ಗುರುಗಳ ಕರುಣೆ ಅಗತ್ಯ, ಗುರುಗಳ ಕರುಣೆಯಿಂದ ಶಿಷ್ಯನ ಅಜ್ಞಾನ ದೂರವಾಗುತ್ತದೆ ಎಂದು ಆಶೀರ್ವಚನ ನೀಡಿದರು.

ಶ್ರೀಗುರುದೇವಾಶ್ರಮದ ಹರ್ಷಾನಂದ ಮಹಾಸ್ವಾಮಿಗಳು ನೇತೃತ್ವ ವಹಿಸಿ ಮಾತನಾಡಿ, ತನ್ನ ಬಗ್ಗೆ ತನಗೆ ಅರಿವು ಉಂಟು ಮಾಡಿಕೊಳ್ಳುವುದನ್ನು ಅನುಭಾವ ಎನ್ನಲಾಗುತ್ತದೆ ಎಂದು ಆಶೀರ್ವಚನ ನೀಡಿದರು.

ಪುಂಡಲೀಕ ಭಜಂತ್ರಿ ಕ್ಲ್ಯಾರಿನೆಟ್ ನುಡಿಸಿದರು. ಗುರುಬಸುಗೌಡ ಪಾಟೀಲ, ಪರಮೇಶ್ವರ ತೇಲಿ, ಶಿವಾನಂದ ಬಾಡನವರ, ರಾಮಚಂದ್ರ ಹೂಗಾರ ಸಂಗೀತ ಸೇವೆ ಸಲ್ಲಿಸಿದರು. ಮುತ್ತು ಗೆದ್ದೆಪ್ಪನವರ ಸ್ವಾಗತಿಸಿ, ನಿರೂಪಿಸಿದರು.

**11 ದಿನ ಮೌನಾನುಷ್ಠಾನ :** ಶ್ರೀಗುರುದೇವಾಶ್ರಮದ ಹರ್ಷಾನಂದ ಮಹಾಸ್ವಾಮಿಗಳು ತಮ್ಮ ವೈಯಕ್ತಿಕ ಸಾಧನೆಗಾಗಿ ಕೈಗೊಂಡಿದ್ದ 11 ದಿನಗಳ ಮೌನಾನುಷ್ಠಾನವನ್ನು ಇದೇ ಸದರ್ಭದಲ್ಲಿ ಅಂತ್ಯಗೊಳಿಸಿದರು. ಮೌನಾನುಷ್ಠಾನದಿಂದ ಮನಃಶಾಂತಿ ಲಭಿಸುತ್ತದೆ. ಭಕ್ತಾದಿಗಳಲ್ಲಿ ಭಕ್ತಿಭಾವ ತುಂಬುತ್ತದೆ ಎಂದು ಹರ್ಷಾನಂದ ಮಹಾಸ್ವಾಮಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

# ಮತ್ತೇ ಚುರುಕುಗೊಂಡ ಮಹಿಷವಾಡಗಿ ಸೇತುವೆ ಕಾಮಗಾರಿ

● ಮಲ್ಲಿಕಾರ್ಜುನ ತುಂಗಳ

**ರಬಕವಿ–ಬನಹಟ್ಟಿ :** ಬೆಳಗಾವಿ–ಬಾಗಲಕೋಟೆ ಜಿಲ್ಲೆ ಬೆಸುಗೆ ಮಾಡುವಲ್ಲಿ ಮಹತ್ತರ ಯೋಜನೆಯಾಗಿರುವ ರಬಕವಿ–ಬನಹಟ್ಟಿ ಜಾಕವೆಲ್‌ನ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗುತ್ತಿರುವ ಮಹಿಷವಾಡಗಿ ಸೇತುವೆ ಕಾಮಗಾರಿ ಮಂದಗತಿಯತ್ತ ಸಾಗಿರುವದು ಇದೀಗ ವೇಗ ಪಡೆದುಕೊಂಡಿದೆ.

2018 ರಲ್ಲಿ ಅಂದಿನ ಸಚಿವೆ ಉಮಾಶ್ರೀಯವರು 30 ಕೋಟಿ ರೂ. ಗಳಷ್ಟು ಟೆಂಡರ್ ಕಾಮಗಾರಿ ಮೂಲಕ ನಾಗಾರ್ಜುನ ಕನಸ್ಟ್ರಕ್ಷನ್ಸ್ ಕಂಪನಿಗೆ ನೀಡಿತ್ತು. ಕಳೆದ ಐದು ವರ್ಷಗಳಲ್ಲಿ ಕೇವಲ ಶೇ.25 ರಷ್ಟು ಮಾತ್ರ ಕಾಮಗಾರಿ ನಡೆದಿತ್ತು.

ಇದಕ್ಕೆ ಪೂರಕವಾಗಿ 2021 ರಲ್ಲಿ ಕಾಮಗಾರಿಗೆ ಮತ್ತಷ್ಟು ಉತ್ತೇಜನ ನೀಡುವ ಸಲುವಾಗಿ ಹಾಲಿ ಶಾಸಕ ಸಿದ್ದು ಸವದಿ ಈ ಟೆಂಡರ್ ಕಾಮಗಾರಿಯನ್ನು 50 ಕೋಟಿ ರೂ. ಗಳವರೆಗೆ ಹೆಚ್ಚಳಗೊಳಿಸುವ ಮೂಲಕ ಕಾಮಗಾರಿ ಮತ್ತಷ್ಟು ಒಳ್ಳೆಯ ಹಾಗು ವಿಸ್ತರಣೆಯಾಗಲೆಂದು ಸರ್ಕಾರದಿಂದ ಅನುಮೋದನೆ ಮಾಡಿದ್ದರು.



ಸುಮಾರು 8 ವರ್ಷಗಳಿಂದ ನಡೆಯುತ್ತಿರುವ ಕಾಮಗಾರಿಯು ಶೇ.50 ರಷ್ಟೂ ಕಾಮಗಾರಿಯಾಗಿಲ್ಲ. ಇದರಿಂದ ಬೆಳಗಾವಿ ಹಾಗು ಬಾಗಲಕೋಟೆ ಜಿಲ್ಲೆಯ ಜನತೆ ಸರ್ಕಾರದ ವಿರುದ್ಧ ಹಿಡಿಶಾಪ ಹಾಕಿದ್ದಾಗಿದೆ.

> "ಪುನರ್ ಕಾಮಗಾರಿ ಪ್ರಾರಂಭಗೊಂಡಿದ್ದು ಸ್ವಾಗತ. ಇದೇ ವೇಗ ಪಡೆದಲ್ಲಿ ವರ್ಷದ ಕೊನೆಯಲ್ಲಿ ಲೋಕಾರ್ಪಣೆಗೊಳ್ಳಲಿದೆ.
> ◆ ಡಾ. ರವಿ ಜಮಖಂಡಿ
> ಅಧ್ಯಕ್ಷ, ಹೋರಾಟ ಸಮಿತಿ, ರಬಕವಿ–ಬನಹಟ್ಟಿ.

> "ಸುಮಾರು 8 ವರ್ಷಗಳಿಂದ ವಿಳಂಬ ಕಾರ್ಯ ಇದಾಗಿದೆ. ಶೀಘ್ರವೇ ಸೇತುವೆ ನಿರ್ಮಿಸಿ ಬೆಳಗಾವಿ–ಬಾಗಲಕೋಟೆ ಜಿಲ್ಲೆಯ ಗಡಿ ಜನತೆಗೆ ಅನುಕೂಲ ಕಲ್ಪಿಸಬೇಕು.
> ◆ ಗಣಪತರಾವ್ ಹಜಾರೆ
> ಉದ್ಯಮಿ, ರಬಕವಿ.

ಪೂರ್ವ ನಿಯೋಜಿತವಾಗಿ ಟೆಂಡರ್ ಕರೆಯದೆ ನದಿಯೊಳಗಿನ ಕಾರ್ಯ ನಡೆಯುವಲ್ಲಿ ವಿಳಂಬಕ್ಕೆ ಕಾರಣವೆನ್ನಲಾಗಿದೆ.

ಮತ್ತೊಂದೆಡೆ ಕಾಮಗಾರಿ ಗುತ್ತಿಗೆ ಪಡೆದಿರುವ ಕಂಪನಿಯ ನಿರ್ಲಕ್ಷ್ಯವೂ ಕಾರಣಕ್ಕೆ ವಿಳಂಬವಾಗಿದೆ.

# ನೀರಿನ ಸಮಸ್ಯೆ ನಿವಾರಣೆಗಾಗಿ ಹೆಸ್ಕಾಂ ಕಛೇರಿಗೆ ಗ್ರಾ.ಪಂ. ಮನವಿ

**ಜಮಖಂಡಿ :** ಜಕನೂರು ಬಹುಹಳ್ಳಿ ಶಾಶ್ವತ ಶುದ್ಧ ಕುಡಿಯುವ ನೀರು ಸರಬರಾಜು ಯೋಜನೆಯ ಜಾಕ್‌ವೆಲ್‌ಗೆ ನಿರಂತರ ವಿದ್ಯುತ್ ಪೂರೈಸುವಂತೆ ಹೆಸ್ಕಾಂ ಉಪವಿಭಾಗ ಸಹಾಯಕ ಕಾರ್ಯನಿರ್ವಾಹಕ ಅಭಯಂತರರಿಗೆ ಹುನ್ನೂರ ಗ್ರಾಮ ಪಂಚಾಯಿತಿ ಮನವಿ ಮಾಡಿದೆ.

ಕಳೆದ ಒಂದು ವಾರದಿಂದ ಜಕನೂರು ಬಹುಹಳ್ಳಿ ಶಾಶ್ವತ ಶುದ್ಧ ಕುಡಿಯುವ ನೀರು ಸರಬರಾಜು ಯೋಜನೆಯ ಜಾಕ್‌ವೆಲ್‌ಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಆಗದಿರುವುದರಿಂದ ಯೋಜನೆ ವ್ಯಾಪ್ತಿಯಲ್ಲಿ ಬರುವ ಹುನ್ನೂರ ಸಹಿತ 7 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉಂಟಾಗಿದೆ. ಬರ ಹಾಗೂ ಬಿಸಿಲಿನಿಂದಾಗಿ ಹುನ್ನೂರ ಗ್ರಾಮದಲ್ಲಿ ಬಹುತೇಕ ಕೊಳವೆ ಬಾವಿಗಳು ಬತ್ತಿವೆ. ಬೇಸಿಗೆಯಲ್ಲಿ ನೀರಿನ ಬೇಡಿಕೆ ಅಧಿಕವಾಗಿದೆ. ಬಹುಹಳ್ಳಿ ಯೋಜನೆ ಮೂಲಕ ಹುನ್ನೂರು ಗ್ರಾಮಕ್ಕೆ ಕೆಲ ಗಂಟೆಗಳವರೆಗೆ ಪೂರೈಕೆ ಆಗುತ್ತಿರುವ ಕೃಷ್ಣಾನದಿ ನೀರು ಹೊರತಾಗಿ ಬೇರೆ ನೀರಿನ ಮೂಲಗಳಿಂದ ಗ್ರಾಮದ ಬೇಡಿಕೆಯನ್ನು ಈಡೇರಿಸುವುದು ಕಷ್ಟ ಸಾಧ್ಯವಾಗಿದೆ ಎಂದು ಹುನ್ನೂರ ಗ್ರಾ.ಪಂ. ಪಿಡಿಒ ಮಲ್ಲಪ್ಪ ರೂಗಿ ಹೆಸ್ಕಾಂ ಇಂಜಿನಿಯರ್‌ಗೆ ಮನವಿ ಸಲ್ಲಿಸಿದ್ದಾರೆ.

## ಶ್ರೀ ಭಾಗ್ಯವಂತಿ ನರ್ಸಿಂಗ್ ಕಾಲೇಜ್‌ನಲ್ಲಿ ದಾದಿಯರ ದಿನಾಚರಣೆ ಆಚರಣೆ

# ದಾದಿಯರು ನಿಜಕ್ಕೂ ತಾಯಿಯ ಸ್ವರೂಪದಲ್ಲಿದ್ದಾರೆ: ಡಾ. ತಳ್ಳೊಳ್ಳಿ




**ತಾಳಿಕೋಟೆ :** ಅನಾರೋಗ್ಯದಿಂದ ಆಸ್ಪತ್ರೆ ಸೇರಿದಾಗ ಅಲ್ಲಿ ವೈದ್ಯರಷ್ಟೇ ರೋಗಿಗಳನ್ನು ಶುಶ್ರೂಷೆ ಮಾಡುವವರು ದಾದಿಯರು. ಹಗಲು ರಾತ್ರಿ ಎನ್ನದೆ, ರೋಗಿಗಳ ಸೇವೆ ಮಾಡುವ ನರ್ಸ್‌ಗಳು ನಿಜಕ್ಕೂ ತಾಯಿಯ ಸ್ಥಾನಮಾನವನ್ನು ಹೊಂದಿದವರಾಗಿದ್ದಾರೆಂದು ಶ್ರೀ ಭಾಗ್ಯವಂತಿ ನರ್ಸಿಂಗ್ ಕಾಲೇಜ್ ಅಧ್ಯಕ್ಷರಾದ ಶ್ರೀಮತಿ ಡಾ.ಸವಿತಾ ಈ ತಳ್ಳೊಳ್ಳಿ ಅವರು ಹೇಳಿದರು.

ಶ್ರೀ ಭಾಗ್ಯವಂತಿ ಶಿಕ್ಷಣ ಸಂಸ್ಥೆ ಯಡಿಯಲ್ಲಿ ನಡೆಯುತ್ತಿರುವ ಶ್ರೀ ಭಾಗ್ಯವಂತಿ ನರ್ಸಿಂಗ್ ಕಾಲೇಜ್‌ನಲ್ಲಿ ಏರ್ಪಡಿಸಲಾದ ಅಂತಾರಾಷ್ಟ್ರೀಯ ದಾದಿಯರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಆರೋಗ್ಯ ಕ್ಷೇತ್ರದ ಸುಧಾರಣೆಗಾಗಿ ತನ್ನದೇ ಕೊಡುಗೆ ನೀಡಿದ ವಿಶ್ವ ವಿಖ್ಯಾತ ನರ್ಸ್, ಫ್ಲಾರೆನ್ಸ್ ನೈಟಿಂಗೇಲ್ ಅವರ ದಿನವನ್ನು ಪ್ರತಿ ವರ್ಷ ದಾದಿಯರ ದಿನವನ್ನಾಗಿ ಆಚರಿಸುತ್ತಾ ಬರಲಾಗಿದೆ ಫ್ಲಾರೆನ್ಸ್ ನೈಟಿಂಗೇಲ್ 12 ಮೇ 1820 ರಲ್ಲಿ ಇಟಲಿಯ ಫ್ಲಾರೆನ್ಸ್‌ನಲ್ಲಿ ಜನಿಸಿದರು. ನೈಟಿಂಗೇಲ್ ಅವರನ್ನು ಆಧುನಿಕ ಶುಶ್ರೂಷೆಯ ಸಂಸ್ಥಾಪಕಿ ಎಂದು ಕರೆಯಲಾಗುತ್ತದೆ. ಇದರ ಹೊರತಾಗಿ ಆಕೆ ಸಮಾಜ ಸುಧಾರಕಿ ಹಾಗೂ ಸಂಖ್ಯಾಶಾಸ್ತ್ರಜ್ಞರಾಗಿ ಗುರುತಿಸಿಕೊಂಡಿದ್ದರು. ಆರೋಗ್ಯ ಕ್ಷೇತ್ರದ ಸುಧಾರಣೆಗಾಗಿ ಅವರು ನೀಡಿದ ಕೊಡುಗೆ ಅಪಾರವಾದುದು. ಅಷ್ಟೇ ಅಲ್ಲ, 150ಕ್ಕೂ ಹೆಚ್ಚು ಪುಸ್ತಕಗಳು, ಕರಪತ್ರಗಳು ಹಾಗೂ ಆರೋಗ್ಯ ಸಮಸ್ಯೆಗಳ ಕುರಿತು ವರದಿಗಳನ್ನು ಬರೆದಿದ್ದಾರೆ. ಫ್ಲಾರೆನ್ಸ್ ನೈಟಿಂಗೇಲ್ ಅವರನ್ನು 'ಲೇಡಿ ವಿತ್ ದಿ ಲ್ಯಾಂಪ್' ಎಂದೂ ಕರೆಯಲಾಗುತ್ತದೆ. 1853–1856 ರ ನಡುವೆ ಜರುಗಿದ ಕ್ರೈಮನ್ ಯುದ್ಧದ ವೇಳೆ ಗಾಯಗ–ೊಂಡಿದ್ದ ಸಾವಿರಾರು ಬ್ರಿಟಿಷ್ ಸೈನಿಕರನ್ನು ಆಕೆ ಆರೈಕೆ ಮಾಡಿದ್ದರು. ಇದನ್ನು ಇಂದಿಗೂ ನೆನಪಿಸಿಕೊಳ್ಳಲಾಗುತ್ತದೆ ಆರೋಗ್ಯ ಸಮಸ್ಯೆಯಿಂದ ಬರುವ ಪ್ರತಿಯೊಬ್ಬರಿಗೂ ಆರೈಕೆ ಮಾಡುವದಾದಿಯರುತಾಯಿಯ ಸ್ವರೂಪವನ್ನು ಪಡೆದಿದ್ದಾರೆ ಅಂತವರ ಸೇವೆ ನಿಜಕ್ಕೂ ಶ್ಲಾಘನೀಯವಾಗಿದೆ ಎಂದರು. ಕಾಲೇಜಿನ ಪ್ರಾಚಾರ್ಯ ಪ್ರೋ. ಅನೀಲ ಪತ್ರಿಮಠ ಅವರು ಮಾತನಾಡಿ 1860 ರಲ್ಲಿ ಲಂಡನಿನಲ್ಲಿ ಫ್ಲಾರೆನ್ಸ್ ನೈಟಿಂಗೇಲ್, ಸೆಂಟ್ ಥಾಮಸ್ ಹೆಸರಿನ ಆಸ್ಪತ್ರೆಯೊಂದರನ್ನು ತೆ–ರೆದು ನೂರಾರು ಮಹಿಳೆಯರಿಗೆ ಕೆಲಸ ನೀಡಿದರು. ಈ ಮೂಲಕ ವೃತ್ತಿಪರ ಶುಶ್ರೂಷೆಯ ಅಡಿಪಾಯ ಹಾಕಿದರು. ಇದು ಅವರಿಗೆ ಮತ್ತಷ್ಟು ಹೆಸರು ನೀಡಿತು. ಫ್ಲಾರೆನ್ಸ್ ನೈಟಿಂಗೇಲ್ ಅವರ ಸೇವೆಗಾಗಿ 1907 ರಲ್ಲಿ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿ ನೀಡಿ ಗೌರವಿಸಲಾಯ್ತು. ಈ ಪ್ರಶಸ್ತಿ ಪಡೆದ ವಿಶ್ವದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು. ದಾದಿಯರು ಎಂದರೆ ನಮ್ಮ ವೈರಿಗಳಿಗೆ ಸೇವೆ ನೀಡುವ ಗುಣಹೊಂದಿದಂತಹ ತಾಯಂದಿರರಾಗಿದ್ದಾರೆ ಅವರ ಸೇವೆಯಿಂದ ಭಾರತ ರೋಗಮುಕ್ತವಾಗಿ ನಿಲ್ಲಲು ಕಾರಣವಾಗಿದೆ ಎಂದರು.

ಕಾರ್ಯಕ್ರಮಕ್ಕೂ ಮೊದಲು "ನಮ್ಮ ನರ್ಸ್ ನಮ್ಮ ಭವಿಷ್ಯ ಸೇವೆಯ ಆರ್ಥಿಕ ಶಕ್ತಿ" ವಿಷಯದಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು ರಂಗೋಲಿ ಮತ್ತು ಚಿತ್ರಕಲಾ ಪ್ರತಿಯೊಗಿತ್ವಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಈ ಸಮಯದಲ್ಲಿ ಸುವರ್ಣ ಹಿರೇಮಠ, ಅಕ್ಷತ ಭಾಬನ್ನವರ, ಅಶ್ವಿನಿ, ವಿನಯ ಮಡಿವಾಳ, ಜ್ಯೋತಿ ಹೂಗಾರ, ಕಾವ್ಯ ಕಾಮನಕೇರಿ, ನಜ್ಮಾ ಹಕೀಮ್ ಉಪಸ್ಥಿತರಿದ್ದರು.

# ಮೊಣಕಾಲಿನ ಸಂಧು ಅಂಟೋಮೆಡಿಯಲ್ ಸಂಧಿವಾತದ ಯಶಸ್ವಿ ಶಸ್ತ್ರಚಿಕಿತ್ಸೆ



**ಬೆಳಗಾವಿ :** ಕಳೆದ 7 ವರ್ಷಗಳಿಂದ ತೀವ್ರ ಮೊಣಕಾಲು ನೋವಿನಿಂದ ಬಳಲುತ್ತಿದ್ದ 77 ವರ್ಷದ ವ್ಯಕ್ತಿಯನ್ನು ತಪಾಸಣೆಗೊಳ್ಪಡಿಸಿದಾಗ ಮೊಣಕಾಲಿನ ಸಂಧು ಅಂಟೋಮೆಡಿಯಲ್ ಸಂಧಿವಾತದ ಪರಿಣಾಮ ಕೇವಲ ಅರ್ಧ ಭಾಗ ಮಾತ್ರ ಹಾಳಾಗಿರುವದನ್ನು ಕಂಡು ಹಿಡಿದರು. ಮೊಣಕಾಲಿನ ಸಂಧು ಬದಲಾವಣೆ ಮಾಡಬೇಕಾದರೆ ಸಂಪೂರ್ಣವಾಗಿ ತೆಗೆದು ಹೊಸದಾಗಿ ಹಾಕಬೇಕು. ಆದರೆ ಈ ರೋಗಿಯ ಹಾಳಾದ ಅರ್ಧ ಮೊಣಕಾಲಿನ ಸಂಧು ಮಾತ್ರ ಬದಲಾವಣೆ ಮಾಡುವಲ್ಲಿ ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆಯ ಎಲಬು ಕೀಲು ತಜ್ಞವೈದ್ಯರು ಯಶಸ್ವಿಯಾಗಿದ್ದಾರೆ.

ನಗರದ ವೃದ್ಧರಾದ ಇವರು ಅರ್ಥ್ರೈಟಿಸ ಕಾರಣದಿಂದ ಮೊಣಕಾಲಿನ ಸಂದು ಅರ್ಧ ಮಾತ್ರ ಹಾಳಾಗಿತ್ತು. ಹಲವು ಆಸ್ಪತ್ರೆಗಳಿಗೆ ತೆರಳಿದರೂ ಕೂಡ ಸಂಪೂರ್ಣ ಮೊಣಕಾಲು ಸಂದು ಜೋಡಣೆ ಮಾಡುವದು ಅನಿವಾರ್ಯ ಎಂದು ಹೇಳಿದ್ದರು. ಇದರಿಂದ ವೃದ್ದರು ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳುವಲ್ಲಿ ಹಿಂಜ–ರಿಯುತ್ತಿದ್ದರು. ನಂತರ ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆಯ ವೈದ್ಯರನ್ನು ಭೇಟಿಯಾದಾಗ ಮೊಣಕಾಲಿನ ಸಂಧು ಅಂಟೋಮೆಡಿಯಲ್ ಸಂಧಿವಾತದ ಪರಿಣಾಮ ಕೇವಲ ಅರ್ಧ ಭಾಗ ಮಾತ್ರ ಹಾಳಾಗಿರುವದನ್ನು ಕಂಡು ಹಿಡಿದರು. ನೋವು ನಿವರಣೆ ಹಾಗೂ ಸರಿಯಾಗಿ ನಡೆದಾಡಬೇಕಾದರೆ ಶಸ್ತ್ರಚಿಕಿತ್ಸೆ ಮಾಡಲೇಬೇಕೆಂದು ಮನವರಿಕೆ ಮಾಡಿದರು. ಡಾ. ಎಸ್ ವಿ ಉದಪುಡಿ ಅವರ ಮಾರ್ಗದರ್ಶನದಲ್ಲಿ ಯುವ ವೈದ್ಯರಾದ ಡಾ. ನಿಖಿಲ್ ಮಾನ್ವಿ ಅವರು ಯಶಸ್ವಿ ಶಸ್ತ್ರಚಿಕಿತ್ಸೆ ನೆರವೇರಿಸಿದರು.

4ನೇ ಹಂತದ ಸಂಧಿವಾತ ಹೊಂದಿರುವ ರೋಗಿಗಳಲ್ಲಿ ಕೇವಲ ಅರ್ಧ ಭಾಗ ಮಾತ್ರ ಸಂದು ಹಾಳಾಗಿರುವದು ಸಾಮಾನ್ಯವಾಗಿ ಕಂಡು ಬರುತ್ತದೆ. ಅಂತಹ ರೋಗಿಗಳಲ್ಲಿ ಪೂರ್ಣಪ್ರಮಾಣದಲ್ಲಿ ಮೊಣಕಾಲ ಸಂಧು ಬದಲಾವಣೆ ಮಾಡಬೇಕಾಗುತ್ತದೆ. ಆದ–ರೆ ಇಲ್ಲಿ ಹಾಳಾದ ಅರ್ಧ ಸಂಧು ತೆಗೆದು ಜೋಡಣೆ ಮಾಡಲಾಗಿದೆ.

ಅತ್ಯಂತ ಕ್ಲಿಷ್ಟಕರ ಮತ್ತು ದೀರ್ಘವಾದ ಶಸ್ತ್ರಚಿಕಿತ್ಸೆಯಾಗಿದ್ದು, ಚಿಕ್ಕರಂದ್ರದ ಮೂಲಕ ನೆರವೇರಿಸಲಾಗಿದೆ. ಇದ–ರಿಂದ ರೋಗಿಯು ವೇಗವಾಗಿ ಗುಣಮುಖಗೊಂಡು ನಡೆದಾಡಲು ಪ್ರಾರಂಭಿಸಿದರು. ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿದ ವೈದ್ಯರ ತಂಡವನ್ನು ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ. ಪ್ರಭಾಕರ ಕೋರೆ ಹಾಗೂ ಆಡಳಿತ ಮಂಡಳಿ ಸದಸ್ಯರು, ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರಾದ ಡಾ. (ಕರ್ನಲ್) ಎಂ ದಯಾನಂದ ಅವರು ಅಭಿನಂದಿಸಿದ್ದಾರೆ.

# ಬೌದ್ಧ ಧಮ್ಮ ಉಳಿವಿಗಾಗಿ ಉಪಾಸಕರ ಮೇಲೆ ದೊಡ್ಡ ಜವಾಬ್ದಾರಿ ಇದೆ: ಚಿಂತಕ ಜೆ. ಎಸ್. ಪಾಟೀಲ



**ವಿಜಯಪುರ :** ಭಾರತದಲ್ಲಿ ಹುಟ್ಟಿ ಇಡೀ ವಿಶ್ವದಲ್ಲಿ ಹರಡಿರುವ ತಥಾಗತ ಗೌತಮ ಬುದ್ಧರ ಬೌದ್ಧ ಧಮ್ಮವನ್ನು ಉಳಿಸಲು ಮತ್ತು ಅದನ್ನು ಬೆಳೆಸಲು ಧಮ್ಮದ ಉಪಾಸಕರ ಮೇಲೆ ಬಹು ದೊಡ್ಡ ಜವಾಬ್ದಾರಿಯಿಂದ ಎಂದು ಚಿಂತಕ ಜೆ. ಎಸ್. ಪಾಟೀಲ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

ನಗರದ ಸಾರಿಪುತ್ರ ಬುದ್ಧ ವಿಹಾರದಲ್ಲಿ ತಥಾಗತ ಗೌತಮ ಬುದ್ಧರ 2568 ನೇ ಜನ್ಮ ಜಯಂತಿ ಪ್ರಯುಕ್ತ ಆಯೋಜಿಸಿದ ಸಮಾರಂಭದಲ್ಲಿ ಮುಖ್ಯ ಉಪನ್ಯಾಸಕರಾಗಿ ಅವರು ಮಾತನಾಡಿದ ಅವರು, ಜಗತ್ತಿಗೆ ಶಾಂತಿ ಸಂದೇಶ ಸಾರಿದ ಮಹಾನ್ ಚೇತನ ಗೌತಮ್ ಬುದ್ಧರನ್ನು ನಮಗೆಲ್ಲ ಪರಿಚಯಿಸಿದವರು ಭೋದಿಸತ್ವ ಬಾಬಾಸಾಹೇಬ ಅಂಬೇಡ್ಕರವರು. ಅವರು ತೋರಿದ ಬುದ್ಧರ ಮಾರ್ಗ ನಮಗೆಲ್ಲ ಇಂದು ವಿಮೋಚನೆಗೆ ಬಹುದೊಡ್ಡ ಸಾಧನವಾಗಿದೆ. ಭಾರತ ಜಗತ್ತಿಗೆ ಬೆಳಕಾಗಿ ವಿಶ್ವಕ್ಕೆ ಗುರುವಾಗಿ ಕಂಡಿದ್ದು ಬುದ್ಧರ ಜ್ಞಾನದ ಕಾರಣ–ಕ್ಕಾಗಿ ಜಗತ್ತಿನ ಪ್ರಥಮ ವಿಜ್ಞಾನಿ ಕಾರಣ ಹಾಗೂ ಪರಿಣಾಮದ ತತ್ವವನ್ನು ತಿಳಿಸಿದ ಮೊದಲ ವಿಜ್ಞಾನಿ ಗೌತಮರು ಎಂದು ಹೇಳಿದರು.

ಬಾಬಾಸಾಹೇಬ್ ಅಂಬೇಡ್ಕರ್ ಕಂಡ ಪ್ರಬುದ್ಧ ಭಾರತ ಕನಸನ್ನು ನನಸು ಮಾಡುವ ಜವಾಬ್ದಾರಿ ಅವರ ಅನುಯಾಯಿಗಳ ಮೇಲೆ ಅಷ್ಟೆ ಅಲ್ಲದೇ ಧಮ್ಮದ ಉಪಾಸಕರ ಮೇಲೆಯೂ ಇದೆ ಎಂದು ಜೆ. ಎಚ್. ಪಾಟೀಲ ಹೇಳಿದರು.

ಈ ವೇಳೆ ಯೊಗ ಗುರುಗಳಾದ ಮಡಿವಾಳಪ್ಪ ದೊಡ್ಡಮನಿಯವರನ್ನು ಸನ್ಮಾನಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಬೌದ್ಧ ವಿಹಾರ ನಿರ್ಮಾಣ ಸಮಿತಿ ಅಧ್ಯಕ್ಷರಾದ ರಾಜಶೇಖರ ಯಡಹಳ್ಳಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಭಾರತೀಯ ಬೌದ್ಧ ಮಹಾಸಭೆಯ ಬಸವರಾಜ ಚಲವಾದಿ, ಅನ್ನಪೂರ್ಣ ಬೆಳ್ಳೇನ್ನವರ, ಎಂ. ಪಿ. ದೊಡ್ಡಮನಿ, ಅಲ್ಲದೇ ಹಲವು ಮುಖಂಡರು, ಉಪಾಸಕರು ಸಮಾರಂಭದಲ್ಲಿ ಭಾಗವಹಿಸಿದ್ದರು. ವೆಂಕಟೇಶ್ ವಗ್ಗೆನವರ ಅವರು ಸಮಾರಂಭದ ನಿರೂಪಿಸಿ ವಂದಿಸಿದರು.

# ಬಾಲ್ಯ ವಿವಾಹ ತಡೆಗಟ್ಟಲು ಸಾರ್ವಜನಿಕರು ಸಹಕರಿಸಿ

## ಬಾಲ್ಯ ವಿವಾಹ ಪ್ರಕರಣಗಳಲ್ಲಿ ಶಾಲಾ ದಾಖಲಾತಿ ಒದಗಿಸುವುದು ಮುಖ್ಯೋಪಾಧ್ಯಾಯರ ಕರ್ತವ್ಯ: ಡಿಸಿ ನಲಿನ್ ಅತುಲ್



**ಕೊಪ್ಪಳ:** ಬಾಲ್ಯವಿವಾಹ ಪ್ರಕರಣಗಳು ಕಂಡು ಬಂದರೆ ಸಾರ್ವಜನಿಕರು ಮಾಹಿತಿ ನೀಡುವ ಮೂಲಕ ಸಕರಿಸಬೇಕು. ಬಾಲ್ಯವಿವಾಹ ಪ್ರಕರಣಗಳ ತನಿಖೆ ಅಥವಾ ವಿಚಾರಣೆ ಸಂದರ್ಭದಲ್ಲಿ ಬಾಲಕಿಗೆ ಸಂಬಂಧಿಸಿದ ಶಾಲಾ ದಾಖಲಾತಿ ಒದಗಿಸುವುದು ಶಾಲಾ ಮುಖ್ಯೋಪಾಧ್ಯಾಯರ ಕರ್ತವ್ಯ. ದಾಖಲಾತಿ ಒದಗಿಸದ ಮುಖ್ಯೋಪಾಧ್ಯಾಯರ ವಿರುದ್ಧ ಕ್ರಮ ವಹಿಸಲು ಕಾನೂನಿನಲ್ಲಿ ಅವಕಾಶವಿದೆ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಹೇಳಿದರು.

ಗುರುವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಿಳಾ ಮತ್ತು ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕಲಿಕೆ ಟ್ರಸ್ಟ್ ಹಾಗೂ ಕೆ.ಎಚ್.ಪಿ.ಟಿ. ಇವರ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಎಷ್ಟೆಲ್ಲ ಜಾಗೃತಿ ಕಾರ್ಯಕ್ರಮಗಳು, ತಿಳುವಳಿಕೆ ಮೂಡಿಸುವ ಪ್ರಯತ್ನ ಮಾಡಿದಾಗ್ಯೂ ಬಾಲ್ಯವಿವಾಹ ಪ್ರಕರಣಗಳು ದಾಖಲಾಗುತ್ತಿವೆ. ಮುಂಚಿತವಾಗಿ ಮಾಹಿತಿ ದೊರೆತ ಪ್ರಕರಣಗಳಲ್ಲಿ ಬಾಲಕಿಯನ್ನು ರಕ್ಷಿಸಲು ಅವಕಾಶವಿರುತ್ತದೆ. ಆದರೆ ಕೆಲವು ಪ್ರಕರಣಗಳಲ್ಲಿ ಮದುವೆಯ ಯಾವ ಕುರುಹೂ ಸಿಗದಂತೆ ಅಪ್ರಾಪ್ತ ಬಾಲಕಿಯರ ವಿವಾಹ ನಡೆಸಲಾಗುತ್ತದೆ. ನಂತರ ಬೆಳಕಿಗೆ ಬರುವ ಪ್ರಕರಣಗಳು ಕೆಲವು ಮಾತ್ರ. ಇದ–ರಿಂದ ಬಾಲಕಿಯ ಮಾನಸಿಕ, ದೈಹಿಕ ಹಾಗೂ ಸಾಮಾಜಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಶೈಕ್ಷಣಿಕವಾಗಿಯೂ ಬಾಲಕಿ ವಂಚಿತವಾಗುವ ಸಾಧ್ಯತೆ ಇರುತ್ತದೆ. ಅಪ್ರಾಪ್ತ ವಯಸ್ಸಿನ ಗರ್ಭಧಾರಣೆ ತಾಯಿ ಹಾಗೂ ಮಗುವಿನ ಆರೋಗ್ಯದ ದೃಷ್ಠಿಯಿಂದ ಅಪಾಯಕಾರಿಯಾಗಿರುತ್ತದೆ. ಆದ್ದರಿಂದ ಬಾಲ್ಯವಿವಾಹ ಪ್ರಕರಣಗಳಲ್ಲಿ ಸಂಬಂದಿಸಿದ ಎಲ್ಲ ಇಲಾಖೆಗಳ ಅಧಿಕಾರಿಗಳು ಜವಾಬ್ದಾರಿಯಿಂದ ಹಾಗೂ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು. ಇಂತಹ ಪ್ರಕರಣಗಳಲ್ಲಿ ಬಾಲಕಿಯ ವಯಸ್ಸಿನ ದೃಢೀಕರಣಕ್ಕೆ ಶಾಲಾ ದಾಖಲಾತಿಯನ್ನು ಪ್ರಮುಖವಾಗಿ ಪರಿಗಣಿಸಲಾಗುತ್ತದೆ. ವಿಚಾರಣೆ ಅಥವಾ ತನಿಖೆ ಸಂದರ್ಭಗಳಲ್ಲಿ ಬಾಲಕಿಯ ಶಾಲಾ ದಾಖಲಾತಿಯನ್ನು ಒದಗಿಸುವುದು ಶಾಲಾ ಮುಖ್ಯೋಪಾಧ್ಯಾಯರ ಕರ್ತವ್ಯ. ಕರ್ತವ್ಯಲೋಪ ಎಸಗಿದಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಅವಕಾಶವಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಹದಿಹರೆಯದ ಹೆಣ್ಣುಮಕ್ಕಳ ಸಬಲೀಕರಣ ಉದ್ದೇಶದಿಂದ ಸ್ಪೂರ್ತಿ ಯೋಜನೆಯನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿದೆ. ಈ ಯೋಜನೆಯಡಿ ಜಿಲ್ಲೆಯ ಹದಿಹರೆಯದ ಅಂದರೆ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಗುಂಪು ರಚನೆ, ಜೀವನ ಕೌಶಲ್ಯ ಶಿಕ್ಷಣ, ಕಲಿಕಾ ಪ್ರವಾಸ, ನಾಯಕತ್ವ ಮತ್ತು ಸಂವಹನ ತರಬೇತಿ, ಸಂವಾದಗಳು, ಬೋಧನಾ ಅವಧಿಗಳನ್ನು ಕಲಿಸಲಾಗುತ್ತಿದೆ. ಇದರೊಂದಿಗೆ ಪೂರಕ ಚಟುವಟಿಕೆಗಳಾದ ಅಂತರಕ್ರಿಯಾತ್ಮಕ ರಂಗಭೂಮಿ, ಕೈತೋಟ ನಿರ್ವಹಣೆ, ಪೂರಕ ಪೌಷ್ಟಿಕ ಆಹಾರ, ಗ್ರಂಥಾಲಯಗಳಿಗೆ ಬೆಂಬಲ, ಯೋಜನೆಗಳೊಂದಿಗೆ ಸಂಯೋಜನೆಯಲ್ಲಿ ಹುಡುಗಿಯರನ್ನು ಒಳಗೊಂಡು ಚಟುವಟಿಕೆ ನಡೆಸಲಾಗುತ್ತದೆ. ಜೊತೆಗೆ ಹೆಣ್ಣುಮಕ್ಕಳ ಸಬಲೀಕರಣಕ್ಕಾಗಿ ಪಾಲಕರು ನೀಡಬಹುದಾದ ಬೆಂಬಲದ ಕುರಿತು ಪಾಲಕರಿಗೆ ತಿಳುವಳಿಕೆ ಮೂಡಿಸಲಾಗುತ್ತಿದೆ. ಇದರಿಂದ ಈಗಾಗಲೇ ಜಿಲ್ಲೆಯ ಬಹುತೇಕ ಗ್ರಾಮೀಣ ವಿದ್ಯಾರ್ಥಿನಿಯರು ಸಾಮಾಜಿಕವಾಗಿ ತಮ್ಮನ್ನು ತೊಡಗಿಸಿಕೊಳ್ಳುವ, ಸ್ವ–ಂತ ನಿರ್ಧಾರ ಕೈಗೊಳ್ಳುವ, ವಿಶಾಲಾತ್ಮಕ ಹಾಗೂ ಧನಾತ್ಮಕ ಯೋಚನೆಗಳನ್ನು ಹೊಂದುವುದರ ಮೂಲಕ ತಮ್ಮಲ್ಲಿ ಬದಲಾವಣೆ ಕಂಡುಕೊಂಡಿದ್ದಾರೆ. ಇದರ ಜೊತೆಗೆ ಸ್ಪೂರ್ತಿ ತಂಡವು ವಸತಿ ಶಾಲೆಯ ವಿದ್ಯಾರ್ಥಿನಿಯರಿಗೂ ರಕ್ಷಣಾ ಕೌಶಲ್ಯ ಸೇರಿದಂತೆ ವಿವಿಧ ಕೌಶಲ್ಯಗಳನ್ನು ಕಲಿಸಲು ಕ್ರಮ ವಹಿಸಬೇಕು ಎಂದು ಅವರು ಯೋಜನೆಯ ಅನುಷ್ಠಾನಾಧಿಕಾರಿಗಳಿಗೆ ತಿಳಿಸಿದರು.

ಶಾಲಾ ಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದಡಿ ಅಂಗನವಾಡಿಗಳಲ್ಲಿ ಗುಣಮಟ್ಟದ ಶಾಲಾ ಪೂರ್ವ ಶಿಕ್ಷಣ ನೀಡಬೇಕು. ಈಗಾಗಲೇ ನಿಗದಿಪಡಿಸಿರುವ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಹೆಚ್ಚಿನ ಆಸಕ್ತಿ ಬೆಳೆಸಿ, ಮಕ್ಕಳ ಕುತೂಹಲವನ್ನು ಧನಾತ್ಮಕವಾಗಿ ಪರಿವರ್ತಿಸಿ, ಮೂಲಭೂತ, ಸಾಮಾನ್ಯ ವಿಷಯ, ವಸ್ತುಗಳ ಪರಿಚಯ ಮಾಡಿಸಬೇಕು ಎಂದು ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳ ತಮ್ಮ ವ್ಯಾಪ್ತಿಯಲ್ಲಿ ನಿಗದಿಪಡಿಸಿದ ಕರ್ತವ್ಯ ನಿರ್ವಹಿಸಲು ಜಿಲ್ಲಾಧಿಕಾರಿಗಳು ಸೂಚಿಸಿದರು.

ಮಿಷನ್ ಶಕ್ತಿ ಯೋಜನೆಯು ಸಂಬಾಲ್ ಮತ್ತು ಸಾಮರ್ಥ್ಯ ಎಂಬ ಎರಡು ಉಪಯೋಜನೆಗಳನ್ನು ಹೊಂದಿದ್ದು, ಇದರ ಅನುಷ್ಠಾನಕ್ಕಾಗಿ ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಘಟಕಗಳನ್ನು ಸ್ಥಾಪಿಸಲಾಗಿದೆ. ಈ ಯೋಜನೆಯಡಿ ಬರುವ ಸಖಿ ಒನ್ ಸ್ಟಾಪ್ ಸೆಂಟರ್, ಪ್ರಧಾನಮಂತ್ರಿ ಮಾತೃವಂದನಾ ಯೋಜನೆ, ಮಹಿಳಾ ಸಹಾಯವಾಣಿ, ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ. ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆಯಲ್ಲಿ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯ ಒದಗಿಸಬೇಕು. ಗರ್ಭಿಣಿ ಹಾಗೂ ಮಗುವಿನ ಆರೋಗ್ಯಕ್ಕೆ ಪೂರಕವಾಗುವಂತೆ ನೀಡಲಾದ ಸೌಲಭ್ಯವನ್ನು ನಿಗದಿತ ಸಮಯಕ್ಕೆ ಒದಗಿಸಬೇಕು. ಸಖಿ ಒನ್ ಸ್ಟಾಪ್ ಸೆಂಟ–ರ್ ನಿಂದ ದೌರ್ಜನ್ಯಕ್ಕೆ ಒಳಗಾದ ಮಗು, ಮಹಿಳೆಯರ ರಕ್ಷನೆ, ಸೂಕ್ತ ಕಾನೂನು ನೆರವು, ಆಪ್ತ ಸಮಾಲೋಚನೆ, ಆರೋಗ್ಯ ಸೇವೆಯನ್ನು ಒದಗಿಸಬೇಕು. ಮಹಿಳಾ ಸಹಾಯವಾಣಿಗೆ ಬರುವ ದೂರುಗಳಿಗೆ ತಕ್ಷಣವೇ ಸ್ಪಂದಿಸಿ, ಸೂಕ್ತ ಕ್ರಮ ವಹಿಸಬೇಕು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿ, ಪೂರಕ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಇಲಾಖೆ ಉಪನಿರ್ದೇಶಕರಾದ ತಿಪ್ಪಣ್ಣ ಸಿರಸಗಿ ಮಾತನಾಡಿ, ವಿಶೇಷ ಪಾಲನಾ ಯೋಜನೆಯಡಿ ಅರ್ಹ ಮಗುವಿಗೆ ವೈದ್ಯಕೀಯ, ಪೌಷ್ಠಿಕ ಆಹರ, ಶಿಕ್ಷಣ ಮತ್ತು ಇತರೆ ಅವಶ್ಯಕತೆಗಳನ್ನು ಪೂರೈಸಲು ಕುಟುಂಬಕ್ಕೆ ಪೂರಕವಾಗಿ ರೂ.1000/–ಗಳ ಆರ್ಥಿಕ ನೆರವನ್ನು ಮಗುವಿಗೆ 18 ವರ್ಷ ಪೂರ್ಣಗೊಳ್ಳುವವರೆಗೆ ಪ್ರತಿ ಮಾಹೆ ಒದಗಿಸಲಾಗುತ್ತದೆ. ಈ ಯೋಜನೆಯಡಿ 2023–24ನೇ ಸಾಲಿನಲ್ಲಿ 931 ಮಕ್ಕಳನ್ನು ಗುರುತಿಸಿ, ಡಿಬಿಟಿ ಮುಖಾಂತರ ಅನುದಾನ ಬಿಡುಗಡೆ ಮಾಡಲಾಗಿದೆ. 2024–25ನೇ ಸಾಲಿನಲ್ಲಿ 915 ಮಕ್ಕಳನ್ನು ಗುರುತಿಸಲಾಗಿದ್ದು, ಅನುದಾನ ಬೇಡಿಕೆಯನ್ನು ಪ್ರಧಾನ ಕಚೇರಿಗೆ ಸಲ್ಲಿಸಲಾಗಿದೆ. ಮಕ್ಕಳಿಗೆ ಕುಟುಂಬದ ವಾತಾವರಣದಲ್ಲಿ ಬೆಳೆಸುವುದು, ಮಕ್ಕಳು ದುಡಿಮೆಗೆ ಹೋಗುವುದನ್ನು ತಪ್ಪಿಸಲು, ಶಿಕ್ಷಣ, ವೈದ್ಯಕೀಯ, ಪೌಷ್ಠಿಕ ಆಹಾರ, ವೃತ್ತಿ ತರಬೇತಿ ಹಾಗೂ ಇತರೆ ಅವಶ್ಯಕತೆಗಳನ್ನು ಪೂರೈಸಲು ಮಿಷನ್ ವಾತ್ಸಲ್ಯ ಯೋಜನೆಯಡಿ ಪ್ರಾಯೋಜಕತ್ವ ಯೋಜನೆಯನ್ನು ಅನಷ್ಠಾನಗೊಳಿಸಿದ್ದು, ಫಲಾನುಭವಿಗೆ ಪ್ರತಿ ಮಾಹೆ ರೂ.4000/–ಗಳ ಅನುದಾನ ನೀಡಲಾಗುತ್ತದೆ. ಈ ಯೋಜನೆಯಡಿ 2024–25ನೇ ಸಾಲಿನ ಏಪ್ರಿಲ್ ವರೆಗೆ 240 ಅರ್ಜಿಗಳು ಸ್ವೀಕೃತವಾಗಿದ್ದು, ಮಕ್ಕಳ ಮನೆ, ಭೇಟಿ, ಪರಿಶೀಲನೆ ಕಾರ್ಯ ಪ್ರಗತಿಯಲ್ಲಿದೆ. ಇದರೊಂದಿಗೆ ಮುಖ್ಯಮಂತ್ರಿ ಬಾಲಸೇವಾ ಯೋಜನೆ, ಪಿಎಂ ಕೇರ್ ಫಾರ್ ಚಿಲ್ಡ್ರನ್, ಉಪಕಾರ್ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಪ್ರಾರಂಭಿಕ ಹಾಗೂ 2023–24ನೇ ಸಾಲಿನಲ್ಲಿ ದಾಖಲಾದ ಒಟ್ಟು 208 ಪೋಕ್ಸೋ ಪ್ರಕರಣಗಳಲ್ಲಿ 101 ಪ್ರಕರಣಗಳಲ್ಲಿ ಆರೋಪಿ ಖುಲಾಸೆಯಾಗಿದ್ದು, 4 ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ. 103 ಪ್ರಕರಣಗಳು ವಿವಿಧ ಹಂತಗಳಲ್ಲಿ ಬಾಕಿ ಇವೆ. ಬಾಕಿ ಇರುವ 103 ಪ್ರಕರಣಗಳು ಹಾಗೂ 2024–25ನೇ ಸಾಲಿನ ಏಪ್ರಿಲ್ ಮಾಹೆವರೆಗೆ ದಾಖಲಾದ ಒಟ್ಟು 106 ಪ್ರಕರಣಗಳಲ್ಲಿ 06 ರಲ್ಲಿ ಆರೋಪಿ ಖುಲಾಸೆಯಾಗಿದ್ದು, ಇನ್ನೂ 100 ಪ್ರಕರಣಗಳು ವಿವಿಧ ಹಂತಗಳಲ್ಲಿ ಬಾಕಿ ಇವೆ ಎಂದು ಮಾಹಿತಿ ನೀಡಿದ ಅವರು, ಇಲಾಖೆಯ ವಿವಿಧ ಕಾರ್ಯಕ್ರಮಗಳ ಪ್ರಗತಿ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಲಿಂಗರಾಜು ಟಿ., ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ರವೀಂದ್ರನಾಥ, ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಪ್ರಕಾಶ, ನಿರೂಪಣಾಧಿಕಾರಿ ಗಂಗಪ್ಪ, ಯುನಿಸೆಫ್ನ ಹರೀಶ್ ಜೋಗಿ, ಜಿಲ್ಲಾ ಹಾಗೂ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಅಂಗನವಾಡಿ ಸೂಪರ್‌ವೈಸರ್‌ಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಜಿಲ್ಲಾಧಿಕಾರಿಗಳ ಜತೆ ಸಿಎಂ ವಿಡಿಯೋ ಸಂವಾದ: ಬಿತ್ತನೆ ಬೀಜ–ಗೊಬ್ಬರ ಸಮರ್ಪಕ ವಿತರಣೆಗೆ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಸೂಚನೆ



**ಬೆಳಗಾವಿ :** ಮಳೆಗಾಲ ಆರಂಭಗೊಳ್ಳಲಿರುವುದರಿಂದ ಮುಂಗಾರು ಹಂಗಾಮಿಗೆ ಬಿತ್ತನೆ ಬೀಜಗಳ ಸಮರ್ಪಕ ವಿತರಣೆಗೆ ಕೃಷಿ ಇಲಾಖೆಯ ಅಧಿಕಾರಿಗಳು ಸೂಕ್ತ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬರ ನಿರ್ವಹಣೆ ಹಾಗೂ ಮಳೆಗಾಲದ ಸಿದ್ಧತೆ ಕುರಿತು ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳ ಜತೆ ಗುರುವಾರ(ಮೇ 23) ವಿಡಿಯೋ ಸಂವಾದ ನಡೆಸಿದ ಬಳಿಕ ನಡೆದ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಬೀಜ ವಿತರಣಾ ಕೇಂದ್ರಗಳಿಗೆ ರೈತರು ಏಕಕಾಲಕ್ಕೆ ಆಗಮಿಸಿದಾಗ ಬೀಜ–ಗೊಬ್ಬರ ವಿತರಣೆಯಲ್ಲಿ ಯಾವುದೇ ರೀತಿಯ ಅನಾನುಕೂಲ ಆಗದಂತೆ ಎಚ್ಚರಿಕೆ ವಹಿಸಬೇಕು. ಸರದಿಯ ಪ್ರಕಾರ ಟೋಕನ್ ವಿತರಿಸುವ ಮೂಲಕ ಅನಗತ್ಯ ಗದ್ದಲ–ಗೊಂದಲಗಳಿಗೆ ಕಡಿವಾಣ ಹಾಕಬೇಕು. ಅಗತ್ಯವಿದ್ದರೆ ಹೆಚ್ಚುವರಿ ವಿತರಣಾ ಕೇಂದ್ರಗಳನ್ನು ಆರಂಭಿಸಬೇಕು. ಆಯಾ ಬೀಜ ವಿತರಣಾ ಕೇಂದ್ರಗಳಲ್ಲಿ ಲಭ್ಯವಿರುವ ಬೀಜ ದಾಸ್ತಾನು ಕುರಿತು ರೈತರಿಗೆ ಮಾಹಿತಿಯನ್ನು ನಿರಂತರವಾಗಿ ಒದಗಿಸಬೇಕು ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿಸರು.

ಕಲುಷಿತ ನೀರಿನಿಂದ ಆರೋಗ್ಯ ಸಮಸ್ಯೆ ಉದ್ಭವಿಸುತ್ತಿರುವುದರಿಂದ ಕುಡಿಯುವ ನೀರು ಪೂರೈಸುವಾಗ ಕಡ್ಡಾಯವಾಗಿ ನೀರಿನ ಗುಣಮಟ್ಟವನ್ನು ಪರೀಕ್ಷೆ ನಡೆಸಬೇಕು ಎಂದು ಜಿಲ್ಲೆಯ ಎಲ್ಲ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದರು.

ವಿಡಿಯೋ ಸಂವಾದದಲ್ಲಿ ಮುಖ್ಯಮಂತ್ರಿಗಳು ನಿರ್ದೇಶನ ನೀಡಿರುವಂತೆ ಕುಡಿಯುವ ನೀರಿನ ಸಮಸ್ಯೆ ಕಂಡುಬಂದರೆ ತಕ್ಷಣವೇ ಕ್ರಮ ಕೈಗೊಳ್ಳಬೇಕು; ಜಾನುವಾರುಗಳಿಗೆ ಮೇವು; ರೈತರಿಗೆ ಬಿತ್ತನೆ ಬೀಜ–ಗೊಬ್ಬರದ ಕೊರತೆಯಾಗದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು ಎಂದು ಸೂಚನೆ ನೀಡಿದರು.

ಇದಲ್ಲದೇ ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಮೃತರ ವಾರಸುದಾರರಿಗೆ ಯಾವುದೇ ರೀತಿಯ ವಿಳಂಬವಿಲ್ಲದೇ ಆದಷ್ಟು ಬೇಗನೇ ಪರಿಹಾರ ಒದಗಿಸಬೇಕು ಎಂದು ಉಪ ವಿಭಾಗಾಧಿಕಾರಿಗಳು ಮತ್ತು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿದರು.

ಈ ಬಾರಿ ಮಳೆ ಜಾಸ್ತಿಯಾಗುವ ಮುನ್ಸೂಚನೆ ಇರುವುದರಿಂದ ನದಿ ತೀರ ಪ್ರದೇಶಗಳಲ್ಲಿ ಪ್ರವಾಹ ನಿರ್ವಹಣೆಗೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ಅಪರ ಜಿಲ್ಲಾಧಿಕಾರಿ ವಿಜಯಕುಮಾರ್ ಹೊನಕೇರಿ, ಬೆಳಗಾವಿ ಮಹಾನಗರ ಪಾಲಿಕೆಯ ಆಯುಕ್ತರಾದ ಪಿ.ಎನ್.ಲೋಕೇಶ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಶಿವನಗೌಡ ಪಾಟೀಲ, ಪಶುಪಾಲನಾ ಇಲಾಖೆಯ ಉಪ ನಿರ್ದೇಶಕ ಡಾ.ರಾಜೀವ್ ಕೂಲೇರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ಕರ್ನಾಟಕ ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆ:

# ಜಿಲ್ಲಾಧಿಕಾರಿಗಳಿಂದ ಶುಷ್ಕ ದಿನ ಘೋಷಣೆ

**ಕೊಪ್ಪಳ :** ಕರ್ನಾಟಕ ಈಶಾನ್ಯ ಪದವೀಧರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆ–2024ರ ಪ್ರಯುಕ್ತ ಜೂನ್ 3 ರಂದು ಮತದಾನ ನಡೆಯುವುದರಿಂದ ಕರ್ನಾಟಕ ಅಬಕಾರಿ ಪರವಾನಿಗೆಗಳ (ಸಾಮಾನ್ಯ ಷರತ್ತುಗಳು) ನಿಯಮಗಳು 1967 ರ ನಿಯಮ 10 ಬಿ ಹಾಗೂ ಪ್ರಜಾಪ್ರಾತಿನಿಧ್ಯ ಕಾಯ್ದೆ 1951 ರ ಕಲಂ 135 (ಸಿ) ಅನ್ವಯ ಕೊಪ್ಪಳ ಜಿಲ್ಲೆಯಾದ್ಯಂತ ಜೂನ್ 01 ರ ಸಂಜೆ 4 ಗಂಟೆಯಿಂದ ಜೂನ್ 03 ರ ರಾತ್ರಿ 12 ಗಂಟೆಯವರೆಗೆ ಶುಷ್ಕ ದಿನಗಳೆಂದು ಘೋಷಿಸಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ಆದೇಶದನ್ವಯ ಶುಷ್ಕ ದಿನಗಳಂದು ಜಿಲ್ಲೆಯಾದ್ಯಂತ ಎಲ್ಲಾ ರೀತಿಯ ಮದ್ಯ ತಯಾರಿಕೆ, ಮದ್ಯ ಮಾರಾಟ, ಮದ್ಯ ಸಂಗ್ರಹಣೆ ಹಾಗೂ ಮದ್ಯ ಸಾಗಾಟವನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಈ ದಿನಗಳಂದು ಜಿಲ್ಲೆಯಾದ್ಯಂತ ಎಲ್ಲ ರೀತಿಯ ಮದ್ಯ ಮಾರಾಟ ಅಂಗಡಿಗಳು ಮತ್ತು ಬಾರ್‌ಗಳನ್ನು ಸಂಪೂರ್ಣವಾಗಿ ಮುಚ್ಚಬೇಕು ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

# ಮಾಜಿ ಸಚಿವ ಆಂಜನೇಯಗೆ ಎಂ.ಎಲ್.ಸಿ. ಸ್ಥಾನ ನೀಡಲು ಒತ್ತಾಯ

**ಜಮಖಂಡಿ :** ರಾಜ್ಯದಲ್ಲಿ ಜೂನ್ 17 ರಂದು ನಿವೃತ್ತಿ ಹೊಂದಲಿರುವ 11 ಎಂ.ಎಲ್.ಸಿ. ಸ್ಥಾನಗಳಿಗೆ ಕಾಂಗ್ರೆಸ್‌ಪಕ್ಷ ಭರ್ತಿ ಮಾಡುತ್ತಿರುವ ಹಿನ್ನಲೆಯಲ್ಲಿ ಶೋಷಿತರ ದಲಿತರ ನಾಯಕ ಎಚ್.ಆಂಜನೇಯಗೆ ಸ್ಥಾನ ನೀಡಬೇಕೆಂದು ಹಿರಿಯ ದಲಿತ ಮುಖಂಡ ಮುತ್ತಣ್ಣ ಮೇತ್ರಿ ಒತ್ತಾಯಿಸಿದ್ದಾರೆ.



ದಲಿತರ ನಾಯಕ ಎಚ್. ಆಂಜನೇಯಗೆ ಅವರು, ದೇವದಾಸಿ ತಾಯಂದಿರಿಗೆ ತಿಂಗಳ ಮಾಶಾಸನ, ದೇವದಾಸಿ ತಾಯಂದಿರ ಮಕ್ಕಳಿಗೆ ಮದುವೆಗೆ ಪ್ರೋತ್ಸಾಹ ಧನ, ಹೆಚ್ಚಿನ ವಿದ್ಯಾಭ್ಯಾಸ ಮಾಡಲು ವಿದೇಶಕ್ಕೆ ಹೋಗಲು ಪ್ರೋತ್ಸಾಹ ಧನ, ಎಸ್.ಎಸ್.ಪಿ ಮತ್ತು ಟಿಎಸ್.ಪಿ ಜಾರಿಗೆ ತಂದವರು, ಮೊರಾರ್ಜಿ ದೇಸಾಯಿ ಶಾಲೆ, ಕಿತ್ತೂರು ರಾಣಿಚೆನ್ನಮ್ಮ ವಸತಿ ಶಾಲೆ, ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗಳು, ಪ್ರತಿ ಗ್ರಾಮಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಳಿಗೆ ಭವನಗಳ ನಿರ್ಮಾಣ, ಅಭಿವೃದ್ಧಿ ನಿಗಮಗಳಲ್ಲಿ ಸಾವಿರಾರು ಕೋಟಿ ಅನುದಾನ ನೀಡುವ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾಗಿದ್ದ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಬೇಕೆಂದು ಈ ಮೂಲಕ ಕಾಂಗ್ರೆಸ್ ಪಕ್ಷದ ಎಐಸಿಸಿಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾಋು, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಶಃಈಥ ಹೈಕಮಾಂಡ ಗಣ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇವೆ ಎಂದರು.

ಇದೇ ಸಂದರ್ಭದಲ್ಲಿ ದಲಿತ ಮುಖಂಡರಾದ ವಿಲಾಸ ನಡುವಿನಮನಿ, ಗೋವಿಂದ ಗಸ್ತಿ, ಮಾರುತಿ ಮಾದರ, ಸಂಜು ಪೂಜಾರಿ, ಬಸು ಜಮಖಂಡಿ ಸಹಿತ ಹಲವರು ಒತ್ತಾಯಿಸಿದರು.

# ಅಮಾನತ್ತ ರದ್ದುಗೊಳಿಸುವಂತೆ ಒತ್ತಾಯಸಿ ಮಾದಿಗ ಸಮಾಜ ಒತ್ತಾಯ

**ಜಮಖಂಡಿ :** ನಗರದ ತಾಲೂಕಾಡಳಿತ ಕಛೇರಿ ಆವರಣದಲ್ಲಿ ತಾಲೂಕಾ ಮಾದಿಗ ಸಂಘಟಣೆಗಳ ಒಕ್ಕೂಟ ತಾಲೂಕ ಘಟಕದ ಸದಸ್ಯರು ಧಾರವಾಡ–ಹುಬ್ಬಳ್ಳಿ ಮಹಾನಗರ ಡಿಸಿಪಿ ಎಂ.ರಾಜೀವ್ ಮತ್ತು ಡಿ.ವೈ. ಎಸ್.ಪಿ. ವಿಜಯಕುಮಾರ ತಳವಾರ ಅವರ ಮೇಲಿತುವ ಅಮಾನತ್ತು ಆದೇಶವನ್ನು ರದ್ದು ಪಡಿಸುವಂತೆ ಒತ್ತಾಯಿಸಿ ಗ್ರೇಡ್–2 ತಹಶೀಲ್ದಾರ ಶಶಿಧರ ಚಲವಾದಿ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.




ದಲಿತ ಮುಖಂಡ ಮುತ್ತಣ್ಣ ಮೇತ್ರಿ ಮಾತನಾಡಿ, ಧಾರವಾಡ–ಹುಬ್ಬಳ್ಳಿ ಮಹಾನಗರದಲ್ಲಿ ಅಂಜಲಿ ಅಂಬಿಗೇರ ಕೊಲೆ ಪ್ರಕರಣದಲ್ಲಿ ಧಾರವಾಡ–ಹುಬ್ಬಳ್ಳಿ ಮಹಾನಗರ ಡಿಸಿಪಿ ಎಂ.ರಾಜೀವ್ ಮತ್ತು ಡಿ.ವೈ. ಎಸ್.ಪಿ. ವಿಜಯಕುಮಾರ ತಳವಾರ ಅವರನ್ನು ಸಹಾಯಕ ಪೊಲೀಸ್ ಆಯುಕ್ತರು ಕಾನೂನು ಸುವ್ಯವಸ್ಥೆ ಕರ್ನಾಟಕ ಸರ್ಕಾರ ಅಮಾನತ್ತು ಮಾಡಿರುವುದು ಖಂಡನೀಯ ಒಬ್ಬ ದಲಿತ ದಕ್ಷ ಪೊಲೀಸ್ ಅಧಿಕಾರಿಯನ್ನು ವಿನಾಕಾರಣ ಯಾವುದೇ ತಪ್ಪು ಮಾಡದೇ ಇದ್ದರು ಉದ್ದೇಶ ಪೂರ್ವಕವಾಗಿ ಕುತಂತ್ರದಿಂದ ಜಾತಿವಾದಿ ಕಾಣದ ಕೈಗಳ ಒತ್ತಡಕ್ಕೆ ಮಣಿದು ದಲಿತ ಸಮುದಾಯದ ನಿಷ್ಠಾವಂತ ಅಧಿಕಾರಿಗಳನ್ನು ಬಲಿಪಶು ಮಾಡುವ ಉದ್ದೇಶದಿಂದ ಅಮಾನತ್ತುಗೊಳಿಸಿದ್ದು ಮೇಲ್ನೋಟಕ್ಕೆ ಕಂಡು ಬರುತ್ತದೆ. ನಿಜವಾಗಿ ತಪ್ಪು ಎಸಗಿದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸದೇ ದಕ್ಷ ಅಧಿಕಾರಿಗಳ ತೇಜೋವಧೆ ಮಾಡುವ ಉದ್ದೇಶದಿಂದ ಕಾನೂನು ಬಾಹಿರವಾಗಿ ಕ್ರಮ ಕೈಗೊಂಡಿರುವುದನ್ನು ತಾಲೂಕಾ ಮಾದಿಗ ಸಂಘಟನೆಗಳ ಒಕ್ಕೂಟ ಖಂಡಿಸುತ್ತದೆ. ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ಸೂಕ್ಷ್ಮವಾಗಿ ಗಮನಿಸಿ ಯಾವುದೇ ತಪ್ಪು ಮಾಡದೆ ಇರುವ ದಲಿತ ದಕ್ಷ ಪೊಲೀಸ್ ಅಧಿಕಾರಿಗಳನ್ನು ಅಮಾನತ್ತು ಆದೇಶ ರದ್ದು ಪಡಿಸಿ ಮತ್ತೆ ಹುಬ್ಬಳ್ಳಿ, ಧಾರವಾಡ ಮಹಾನಗರಕ್ಕೆ, ಮುಂದುವರಿಸಬೇಕು.

ಒಂದು ವೇಳೆ ಅಮಾನತ್ತು ಮಾಡಿರುವ ಅದೇಶವನ್ನು ರದ್ದು ಪಡಿಸದಿದ್ದರೆ ರಾಜ್ಯ ಸರ್ಕಾರದ ವಿರುದ್ಧ ರಾಜ್ಯದ ಮಾದಿಗ ಸಮುದಾಯ ಬೀದಿಗಿಳಿದು ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದರು.

ಪ್ರತಿಭಟನೆಯಲ್ಲಿ ಮಾದಿಗ ಸಮಾಜ ಒಕ್ಕೂಟದ ತಾಲೂಕಾಧ್ಯಕ್ಷ ಪ್ರಕಾಶ ಲಕ್ಷಪ್ಪ ಹುಗಿನವರ, ಸಂಜು ಪೂಜಾರಿ, ಯಮನೂರ ಮೂಲಂಗಿ, ವೀರಣ್ಣ ರಾಮೋಜಿ, ಮಾರುತಿ ಮಾದರ, ಅರ್ಜುನ ಮಾದರ, ಯಮನಪ್ಪ ಮಾದರ, ಮಾತೇಂಶ ಮಾಂಗ, ಲಕ್ಷ್ಮಣ ಬಳೋಲ, ಸಂಗಮೇಶ ಮಾದರ, ರಮೇಶ ಪೂಜಾರಿ ಸಹಿತ ಹಲವರು ಇದ್ದರು.

### ಬಿ.ವ್ಹಿ.ವ್ಹಿ.ಎಸ್.ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬಾಗಲಕೋಟೆ

# ಮಾನಸಿಕ ಆರೋಗ್ಯ ಅಸ್ವಸ್ಥತೆಗಳ ಚಿಕಿತ್ಸೆಯಲ್ಲಿ ಹೋಮಿಯೋಪಥಿ ಪ್ರಭಾವಿವಾಗಿದೆ: ಡಾ.ಗೀತಾ ಬೊಮ್ಮನಗೌಡ




**ಬಾಗಲಕೋಟೆ :** ಮಾನಸಿಕ ಆರೋಗ್ಯ ಅಸ್ವಸ್ಥತೆಗಳ ಚಿಕಿತ್ಸೆಯಲ್ಲಿ ಹೋಮಿಯೋಪಥಿ ಪ್ರಭಾವಿವಾಗಿದೆ ಹಾಗೂ ಹೋಮಿಯೋಪಥಿ ವಿಧಾನವು ಸಂಪೂರ್ಣವಾಗಿ ಸುರಕ್ಷಿತ ಹಾಗೂ ನೈಸರ್ಗಿಕವಾಗಿದೆ ಎಂದು ಧಾರವಾಡದ ಪ್ರಾಧ್ಯಾಪಕಿ ಡಾ.ಗೀತಾ ಬೊಮ್ಮನಗೌಡ ಹೇಳಿದರು.

ಅವರು ನಗರದ ಬಿ.ವ್ಹಿ.ವ್ಹಿ.ಎಸ್. ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ವೈದ್ಯರು ಮತ್ತು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ಒಂದು ದಿನದ ಮಾನಸಿಕ ರೋಗಗಳ ನಿರ್ವಹಣೆಯಲ್ಲಿ ಹೋಮಿಯೋಪಥಿ ಕುರಿತು ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದರು.

ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮಿ ಪಾಟೀಲ ಮಾತನಾಡಿ ಹೋಮಿಯೋಪತಿ ಚಿಕಿತ್ಸೆಯು ದೈಹಿಕ ಆರೋಗ್ಯ ಸಮಸ್ಯೆಗಳಿಗೆ ಮಾತ್ರ ಸೀಮಿತವಾಗಿಲ್ಲ ಮಾನಸಿಕ ಅಸಮತೋಲನದ ವಿರುದ್ಧ ಕೂಡ ಪರಿಣಾಮಕಾರಿಯಾಗಿದೆ ಎಂದರು.

ಉಪನ್ಯಾಸಕಿ ಡಾ. ಶಮಶಾದ ಅಂಕಲಗಿ ಪರಿಚಯಿಸಿ ಸ್ವಾಗತಿಸಿದರು. ಡಾ.ವಿಜಯಲಕ್ಷ್ಮಿ ಪೂಜಾರ ವಂದಿಸಿದರು. ಪ್ರಾದ್ಯಾಪಕರುಗಳಾದ ಡಾ.ರವಿ. ಎಸ್. ಕೋಟೆಣ್ಣವರ.ಡಾ ಅಮರೇಶ ಬಳಗಾನೂರ ಡಾ.ಸುಧೀರ ಬೆಟಗೇರಿ ಇತರರು ಉಪಸ್ಥಿತರಿದ್ದರು.

### ಸಿಮಿಕೇರಿಯಲ್ಲಿ ವೈಭವದ ಓಕಳಿ ಸಂಭ್ರಮ: 28 ವರ್ಷದ ಬಳಿಕೆ ಶ್ರೀ ಆಂಜನೇಯನ ಓಕಳಿ,

# ಮಳೆ ಬೆಳೆಗಾಗಿ 28 ವರ್ಷಗಳ ನಂತರ ಪುನರಾರಂಭ

**ಬಾಗಲಕೋಟೆ :** ಸಮೀಪದ ಸಿಮಿಕೇರಿ ಗ್ರಾಮದಲ್ಲಿ 28 ವರ್ಷದ ಬಳಿಕ ಇದೆ ಮೊದಲ ರವಿವಾರ ಶ್ರೀ ಆಂಜನೇಯನ ಓಕಳಿ ಸಂಭ್ರಮದಿಂದ ಜರುಗಿ ಗತ ವೈಭವಕ್ಕೆ ಸಾಕ್ಷಿಯಾಯಿತು.

ಸಿಮಿಕೇರಿ ಗ್ರಾಮದ ಶ್ರೀ ಆಂಜನೇಯ ಓಕಳಿ ಸಂಭ್ರಮ ಇದೆ ಮೊದಲ ಬಾರಿಗೆ ಅದು 28 ವರ್ಷದ ಬಳಿಕ ಸಂಭ್ರಮದ ಸಡಗರದಿಂದ ಗ್ರಾಮಸ್ಥರ ಸಮ್ಮೂಕದಲ್ಲಿ ವೈಭದಿಂದ ನಡೆಯಿತು,

ಗ್ರಾಮದಲ್ಲಿ ಗ್ರಾಮ ದೇವತೆಯ ಉಡಿ ತುಂಬುವ ಕಾರ್ಯಕ್ರಮ ಹಾಗೂ ಹನುಮಂತ ದೇವರ ಓಕುಳಿ ಉತ್ಸವ ಅಂಗವಾಗಿ ಶನಿವಾರ ಬೇಳಗಿನ ಜಾವ ಶ್ರೀ ಆಂಜನೇಯನಿಗೆ ಪಂಚಾಮೃತ ಅಭಿಷೇಕ, ಎಲಿ ಪೂಜೆ, ಶ್ರೀರಾಮನಾಮ ಜಪ, ಆಂಜನೇಯ ಚಾಲೀಸ್ ಪಠಣ, ಪುಷ್ಪಾಲಂಕಾರ, ಮಹಾಮಂಗಳಾರುತಿಯೊಂದಿಗೆ ವಿಶೇಷ ಪೂಜಾ ಕೈಕಂರ್ಯಗಳು ಜರುಗಿದವು, ಗ್ರಾಮದ ಜನತೆಗೆ ಪ್ರಸಾದ ವ್ಯವಸ್ಥೆಯನ್ನು ಕೂಡ ಮಾಡಲಾಗಿತ್ತು., ರವಿವಾರ ಬೆಳಿಗ್ಗೆ ಬರಮಪ್ಪ ಅಂಬ್ಲಿಕೊಪ್ಪ ಅವರು ಬಂಡಿಯ ಮುಖಾಂತರ ಓಕಳಿ ಹೊಂಡವನ್ನು ಭರಮದೇವರ ಗುಡಿ ಹತ್ತಿರವಿರು ಐತಿಹಾಸಿಕ ಭಾವಿಯಿಂದ ಬಂಡಿಯಲ್ಲಿ



ನೀರನ್ನು ಡೊಳ್ಳು ಹಾಗೂ ಹಲಗೆ ಮೇಳದೊಂಗೆ ಮೇರವಣಿಗೆ ಮೂಲಕ ಬಂದು ತುಂಬಿಸಲಾಯಿತು, ನಂತರ ಸಂಜೆ ಓಕಳಿ ಹೊಂಡದಲ್ಲಿ ತುಂಬಿದ ನೀರಿನಲ್ಲಿ ಯುವಕರು ಮಿಂದೆದ್ದು ನೀರನ್ನು ಏರೆಚುತ್ತಾ ಓಕಳಿ ಆಡಿದ್ದು ನೆರೆದ ಜನರನ್ನು ಅನುರಂಜಿಸಿತು,

ಕಳೆದ 28 ವರ್ಷಗಳಿಂದ ನಿಂತು ಹೋಗಿದ್ದ ಓಕುಳಿ ಉತ್ಸವ ಈ ವರ್ಷ ಅತ್ಯಂತ ವಿಜ್ರಂಭಣೆಯಿಂದ ಜರುಗಿತು. ಇತ್ತೀಚೆಗೆ ಮಳೆ ಬೆಳೆ ಸಾಂಪ್ರದಾಯವನ್ನು ಸಾರುವ ಸಾರುವ ಅಯ್ಯನವರು ಗ್ರಾಮಕ್ಕೆ ಭೇಟಿ ನೀಡಿದಂತಹ ಸಮಯದಲ್ಲಿ ಗ್ರಾಮದ ಸುತ್ತಮುತ್ತ ಮಳೆ ಆಗದಿರುವ ಬಗ್ಗೆ ಕೇಳಿದಾಗ ಅವರು ಊರಲ್ಲಿ ನಿಂತು ಹೋಗಿರುವ ಓಕುಳಿ ಉತ್ಸವ ಪುನಃ ಆರಂಭಿಸಿ ಎಂದು ಸಲಹೆ ನೀಡಿದರು. ಅವರ ಸಲಹೆಯಂತೆ ಓಕ್ಕುಳಿ ಕೊಂಡವನು ಅಗೆದ ದಿನವೇ ಸಂಜೆ ಸಾಕಷ್ಟು ಮಳೆಯಾಗಿದೆ. ಆದಕಾರಣ ಓಕುಳಿಯನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಆಚರಣೆ ಮಾಡಲಾಯಿತು ಎಂದು ಗ್ರಾಮದ ಮುಖಂಡರಾದ ವೀರಭದ್ರಪ್ಪ ನಾಯಕ ತಿಳಿಸಿದರು,

ಇದೆ ಸಂದರ್ಭದಲ್ಲಿ ಮಳೆ ಬೆಳೆಗಾಗಿ ಆಂಜನೇಯನಿಗೆ ಹಾಗೂ ಗ್ರಾಮದೇವತೆಗೆ ವಿಶೇಷ ಪೂಜೆ ಸಲ್ಲಿಸಿ ಮಳೆ ಬೆಳೆಗಾಗಿ ಪ್ರಾರ್ಥನೆ ಸಲ್ಲಿಸಲಾಯಿತು ಎಂದು ಗ್ರಾಮದ ಹಿರಿಯರಾದ ಮಹದೇವಪ್ಪ ತಳವಾರ ತಿಳಿಸಿದರು.

ಈ ಎಲ್ಲ ಕಾರ್ಯಕ್ರಮಗಳಲ್ಲಿ ಗ್ರಾಮದ ಹಿರಿಯರಾದ ಮಹದೇವಪ್ಪ ತಳವಾರ, ವೀರಭದ್ರಪ್ಪ ನಾಯಕ, ತಿಪ್ಪಣ್ಣ ಹೊರಕೇರಿ, ಎಚ್. ಐ ನಾಯಕ, ಬಾಳಪ್ಪ ಹಟ್ಟಿ, ಈರಪ್ಪ ಕವಳ್ಳಿ, ಸಿದ್ದಪ್ಪ ಹೊರಕೇರಿ, ರಾಜು ಸುನಗದ, ಶಿವು ತಳವಾರ, ಹಾಗೂ ಸಮಸ್ತ ಗ್ರಾಮದ ಗುರುಹಿರಿಯರು ಸೇರಿದಂತೆ ಸಿಮಿಕೇರಿ ಗ್ರಾಮಸ್ಥರು, ಸುತ್ತಮುತ್ತಲಿನ ಗ್ರಾಮದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ಡಿಪ್ಲೋಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

**ಬೆಳಗಾವಿ :** 2024–25 ನೇ ಸಾಲಿನ ಶೈಕ್ಷಣಿಕ ಅವಧಿಗೆ ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ ಡಿಪ್ಲೋಮಾ ಕೋರ್ಸ್‌ಗೆ (ಡಿ.ಹೆಚ್.ಟಿ.ಟಿ) 44 ಪುರುಷರು ಮತ್ತು ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವ್ಯಾಸಂಗದ ಸಮಯದಲ್ಲಿ ಮಾರ್ಗಸೂಚಿ ಪ್ರಕಾರ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳು ರೂ.2,500/ ರಂತೆ ಶಿಷ್ಯವೇತನ ನೀಡಲಾಗುವುದು. ಪುರುಷ ಅಭ್ಯರ್ಥಿಗಳಿಗೆ ವಸತಿ ನಿಲಯದ ಸೌಲಭ್ಯವನ್ನು ಹಣ ಪಾವತಿಸುವ ಆಧಾರದ ಮೇಲೆ ಕಲ್ಪಿಸಲಾಗುವುದು.

ಆಯ್ಕೆಯಾದ ಅಭ್ಯರ್ಥಿಗಳಿಗೆ ರಾಜ್ಯದ ಗದಗ ಜಿಲ್ಲೆಯಲ್ಲಿನ ಬೆಟಗೇರಿ, ತಮಿಳುನಾಡಿನ ಸೇಲಂ, ಆಂದ್ರ ಪ್ರದೇಶದ ವೆಂಕಟಗಿರಿ ನೆಲ್ಲೂರು ಮತ್ತು ಕೇರಳದ ಕಣ್ಣೂರು ದಲ್ಲಿರುವ ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯಲ್ಲಿ ತರಬೇತಿ ನೀಡಲಾಗುವುದು.

ಆಸಕ್ತ ಅಭ್ಯರ್ಥಿಗಳು ಮೇ.31 ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದು. ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ನರಸಾಪೂರ, ಗದಗ–ಬೆಟಗೇರಿ ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯ ವೆಬ್‌ಸೈಟ್ ವಿಳಾಸ https://khtigadag.ac.in/AdmissionForm.pdf ಗೆ ಭೇಟಿ ನೀಡಬಹುದು.

ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ 0831–2950674 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಬೆಳಗಾವಿ ಜಿಲ್ಲಾ ಪಂಚಾಯತ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕೊಡಿಗೆಹಳ್ಳಿಯಲ್ಲಿ ಶ್ರೀ ಚರಣ್ ಸೌಹಾರ್ದ ಕೋ–ಆಪರೇಟೀವ್ ಬ್ಯಾಂಕ್‌ನ 10ನೇ ಶಾಖೆ ಶುಭಾರಂಭ

# ನಂಬಿಕೆ ಬಂದಲ್ಲಿ ಮಾತ್ರ ಬ್ಯಾಂಕ್ ಬೆಳವಣಿಗೆ ಸಾಧ್ಯ: ನಿವೃತ್ತ ಮುಖ್ಯ ನ್ಯಾಯಾಧೀಶರಾದ ಪಿ.ಎಸ್. ದಿನೇಶ್ ಕುಮಾರ್

**ಬೆಂಗಳೂರು :** ಬ್ಯಾಂಕ್ ಎಂಬುದು ಒಂದು ನಂಬಿಕೆಯಾಗಿದ್ದು, ನಂಬಿಕೆ ಬಂದಲ್ಲಿ ಮಾತ್ರ ಬ್ಯಾಂಕ್ ಬೆಳವಣಿಗೆಯಾಗಲು ಸಾಧ್ಯ ಎಂದು ರಾಜ್ಯ ಹೈಕೋರ್ಟ್ ನ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಪಿ.ಎಸ್. ದಿನೇಶ್ ಕುಮಾರ್ ಹೇಳಿದ್ದಾರೆ.



ಸಹಕಾರಿ ರಂಗದಲ್ಲಿ ಮಹತ್ವದ ಹೆಗ್ಗುರುತುಗಳನ್ನು ಮೂಡಿಸುತ್ತಿರುವ ಶ್ರೀ ಚರಣ್ ಸೌಹಾರ್ದ ಕೋ ಆಪರೇಟೀವ್ ಬ್ಯಾಂಕ್ ನ 10 ನೇ ಶಾಖೆಯನ್ನು ಸಹಕಾರಿ ನಗರ ಸಮೀಪದ ಕೊಡಿಗೆ ಹಳ್ಳಿಯಲ್ಲಿ ಶುಭಾರಂಭ ಮಾಡಿ ಮಾತನಾಡಿದ ಅವರು, ಬ್ಯಾಂಕಿನಲ್ಲಿ ಹಣವನ್ನು ಠೇವಣಿಯಾಗಿ ಇಡಬಹುದು ಎಂಬ ನಂಬಿಕೆ ಬಂದಿದ್ದೇ ಆದಲ್ಲಿ ಬ್ಯಾಂಕಿನ ಘನತೆ ಹೆಚ್ಚಾಗುತ್ತದೆ. ಬ್ಯಾಂಕ್ ಗಳು ಗ್ರಾಹಕರ ನಂಬಿಕೆಯನ್ನು ಉಳಿಸಿಕೊಳ್ಳಬೇಕು ಎಂದರು.

ಆಧುನಿಕ ಯುಗದಲ್ಲಿ ಬ್ಯಾಂಕಿಂಗ್ ಸೇವೆ ಹೆಚ್ಚಾಗಬೇಕು. ಉತ್ತಮ ಬೆಳವಣಿಗೆ ಮೂಲಕ ಸಮಾಜಕ್ಕೆ ಅತ್ಯುತ್ತಮ ಸೇವೆ ದೊರಕಿಸಿಕೊಡುವಂತಾಗಬೇಕು. ಬ್ಯಾಂಕ್ ಹೆಚ್ಚು ಶಾಖೆಗಳು ತೆ–ರೆದರೆ ಆರ್ಥಿಕ ಚಟುವಟಿಕೆ ಹೆಚ್ಚಾಗುತ್ತದೆ. ದ್ವಾರಕಾನಾಥ್ ಮತ್ತವರ ತಂಡ ಶ್ರೀ ಚರಣ್ ಸೌಹಾರ್ದ ಕೋ ಆಪರೇಟೀವ್ ಬ್ಯಾಂಕ್ ಅನ್ನು ಅತ್ಯಂತ ದಕ್ಷತೆಯಿಂದ ಮುನ್ನಡೆಸುವ ಮೂಲಕ ಉತ್ತಮ ಸೇವೆ ಸಲ್ಲಿಸುತ್ತಿದೆ ಎಂದು ಹೇಳಿದರು.

ಪಬ್ಲಿಕ್ ಟಿವಿ ಮುಖ್ಯಸ್ಥರಾದ ಹೆಚ್.ಆರ್. ರಂಗನಾಥ್ ಮಾತನಾಡಿ, ಸತ್ಯ, ಧರ್ಮದಿಂದ ಕೆಲಸ ಮಾಡುವುದು ಕಷ್ಟ. ಬ್ಯಾಂಕಿಂಗ್ ವಲಯಕ್ಕೆ ನಂಬಿಕೆಯೇ ಅತಿ ದೊಡ್ಡ ಕೊರತೆ ಇದೆ. ಸಹಕಾರಿ ಬ್ಯಾಂಕಿಂಗ್ ವಲಯದಲ್ಲಿ ಏನು ನಡೆಯಬಾರದು ಎಂದುಕೊಂಡಿದ್ದೇವೆಯೋ ಅದೆಲ್ಲವೂ ನಡೆದುಹೋಗಿದೆ. ಇಂತಹ ಕಾಲಘಟ್ಟದಲ್ಲಿ ಶ್ರೀ ಚರಣ್ ಸೌಹಾರ್ದ ಕೋ ಆಪರೇಟೀವ್ ಬ್ಯಾಂಕ್ ಇದ–ಕ್ಕೆ ಅಪವಾದವಾಗಿದ್ದು, 10 ನೇ ಶಾಖೆಯ ಮೂಲಕ ಬ್ಯಾಂಕ್ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಈ ಸಂದರ್ಭದಲ್ಲಿ ಎಚ್ಚರಿಕೆ ಅಗತ್ಯವಾಗಿದೆ. ಬ್ಯಾಂಕಿನಲ್ಲಿ ಹಣ ಇಡುವವರು ಕಟ್ಟಪಟ್ಟು ದುಡಿದಿರುತ್ತಾರೆ ಎಂಬುದನ್ನು ಮರೆಯಬಾರದು ಎಂದರು.

ಶ್ರೀ ಚರಣ್ ಸೌಹಾರ್ದ ಕೋ ಆಪರೇಟೀವ್ ಬ್ಯಾಂಕ್ ನ ಸಂಸ್ಥಾಪಕ ಅಧ್ಯಕ್ಷ ಬಿ.ವಿ. ದ್ವಾರಕಾನಾಥ್, ಗಾಯತ್ರಿ ದ್ವಾರಕಾನಾಥ್, ನಿರ್ದೇಶಕರಾದ ಎಂ. ಗೋಪಿನಾಥ್, ಉಪಾಧ್ಯಕ್ಷರಾದ ಶುಭಪ್ರದ, ಹಿರಿಯ ವ್ಯವಸ್ಥಾಪಕರಾದ ಟಿ.ಎನ್. ಗೀತಾ ಮತ್ತಿತರರು ಉಪಸ್ಥಿತರಿದ್ದರು.

## ಉದಯಕುಮಾರ ಕಡಕೋಳ ನಿಧನ



**ಜಮಖಂಡಿ :** ನಗರದ ಕಾಂಗ್ರೆಸ್ ಪಕ್ಷದ ಯುವ ಮುಖಂಡ (46) ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ.

ಮಾಜಿ ಶಾಸಕ ಆನಂದ ನ್ಯಾಮಗೌಡ, ಶ್ಯಾಮರಾವ ಘಾಟಗೆ, ವರ್ಧಮಾನ ನ್ಯಾಮಗೌಡ, ನಗರಸಭೆ ಮಾಜಿ ಅಧ್ಯಕ್ಷ ದಾನೇಶ ಘಾಟಗೆ, ಪರಮಾನಂದ ಗವರೋಜಿ, ಬಸವರಾಜ ಹರಕಂಗಿ ಸಹಿತ ಹಲವರು ಸಂತಾಪ ಸೂಚಿಸಿದ್ದಾರೆ.

## ಸುಮಾ ಹಾವಿನಾಳ ನಿಧನ



**ರಬಕವಿ–ಬನಹಟ್ಟಿ :** ನಗರದ ಸೋಮವಾರ ಪೇಟೆಯ ನೂತನ ವಿದ್ಯಾಲಯ ಹತ್ತಿರದ ನಿವಾಸಿ ಸುಮಾ ಹಾವಿನಾಳ(58) ನಿಧನರಾದರು. ಮೃತರಿಗೆ ಪತಿ, ಇಬ್ಬರು ಪುತ್ರರು ಹಾಗು ಓರ್ವ ಪುತ್ರಿ ಸೇರಿದಂತೆ ಅಪಾರ ಬಳಗವಿದೆ. ಮೃತರ ಪತಿ ಸಿದ್ದರಾಮ ಹಾವಿನಾಳ ಎಸ್‌ಆರ್‌ಎ ಹೈಸ್ಕೂಲ್‌ನ ನಿವೃತ್ತ ಉಪಪ್ರಾಚಾರ್ಯರಾಗಿದ್ದಾರೆ.

## ಪಾರವ್ವ ಬಂಡಿವಡ್ಡರ ನಿಧನ



**ಮಹಾಲಿಂಗಪುರ :** ಪಟ್ಟಣದ ಸಾಧುನಗುಡಿ ನಿವಾಸಿ ಪಾರವ್ವ ರಾಮಪ್ಪ ಬಂಡಿವಡ್ಡರ (55) ನಿಧನರಾದರು.

ಮೃತರು ಸರ್ ಎಂ. ವಿಶ್ವೇಶ್ವರಯ್ಯ ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾಧ್ಯಕ್ಷ ಅರ್ಜುನ ಸೇರಿದಂತೆ ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ಲೋಕಸಭಾ ಚುನಾವಣೆ

# ನೇಕಾರ ನಗರಿಯಲ್ಲಿ ಬೆಟ್ಟಿಂಗ್ ಜೋರು

● ಮಲ್ಲಿಕಾರ್ಜುನ ತುಂಗಳ

**ರಬಕವಿ–ಬನಹಟ್ಟಿ :** ಎಲ್ಲ ಹಂತದ ಚುನಾವಣೆ ಮುಕ್ತಾಯ ಹಂತ ತಲುಪಿದ್ದು, ಇದೀಗ ಜೂನ್ 4 ರಂದು ನಡೆಯಲಿರುವ ಮತ ಎಣಿಕೆ ದಿನದ ಕ್ಷಣಗಣನೆಯಲ್ಲಿರುವ ಅಭ್ಯರ್ಥಿಗಳ ಭವಿಷ್ಯ ಮತಬುಟ್ಟಿಯಲ್ಲಿ ಭದ್ರವಾಗಿದೆ.

ಈ ಮಧ್ಯೆ ದೇಶದ ಚುನಾವಣೆಗೆ ಬಾಜಿ ಕಟ್ಟುವವರ ಸಂಖ್ಯೆ ಜೋರಾಗಿದೆ. ಅದ್ರಲ್ಲೂ ನೇಕಾರ ನಗರಿ ರಬಕವಿ–ಬನಹಟ್ಟಿಯಲ್ಲಿ ಬೆಟ್ಟಿಂಗ್ ಭರಾಟೆ ಜೋರಾಗಿದೆ.

ಐಪಿಎಲ್ ಮುಕ್ತಾಯಗೊಂಡಿರುವ ಕಾರಣ ಇದೀಗ ದೊಡ್ಡ ದೊಡ್ಡ ಕೊಳಗಳು ಚುನಾವಣೆ ಬೆಟ್ಟಿಂಗ್‌ನತ್ತ ವಾಲಿದ್ದಾರೆನ್ನಲಾಗಿದೆ.

ಎರಡೂ ಪಕ್ಷಗಳ ಕಾರ್ಯಕರ್ತರ ನಡುವೆ ಮುಖಾಮುಖಿ ಭೆಟ್ಟಿಂಗ್ ಕಟ್ಟಿಕೊಂಡರೆ, ಇನ್ನೂ ಕೆಲ ಬುಕ್ಕಿಗಳಿಂದಲೂ ಈ ಕಾರ್ಯ ತೆರೆಮರೆಯಲ್ಲಿ ನಡೆಯುತ್ತಿದೆ. ಬೆಟ್ಟಿಂಗ್‌ನಲ್ಲಿ ಕೇವಲ ಹಣವಷ್ಟೇ



ಅಲ್ಲ ಬೈಕ್, ಕಾರ್ ಸೇರಿದಂತೆ ಇತರೆ ಬೆಲೆಬಾಳುವ ಭೂಮಿಯನ್ನೂ ಕೂಡ ಪಣಕ್ಕಿಡ್ತಾರೆ ಎನ್ನಲಾಗ್ತಿದೆ.

ಚುನಾವಣೆ ನಂತರ ಅಭ್ಯರ್ಥಿಗಳ ಪರವಾದ ಮಾಹಿತಿ ನೋಡಿ ಬೆಟ್ಟಿಂಗ್ ಕಟ್ಟಲಾಗ್ತಿದ್ದರೆ, ಇನ್ನೂ ಕೆಲವರು ತಮ್ಮ ಪಕ್ಷವೇ ಗೆಲ್ಲುವದೆಂಬ ವಿಶ್ವಾಸದಿಂದ ರೂಪಾಯಿಗೆ ದುಪ್ಪಟ್ಟು ನೀಡುವದಾಗಿ ಹೇಳಿ ಬೆಟ್ಟಿಂಗ್ ನಡೆಸುತ್ತಿದ್ದಾರೆ.

ಚುನಾವಣೆ ಪ್ರಕ್ರಿಯೆ ಮುಕ್ತಾಯಗೊಂಡಿದ್ದರ ಹಿನ್ನಲೆ ಮತದಾರರ ಲೆಕ್ಕಾಚಾರ ನೋಡಿ ಬೆಟ್ಟಿಂಗ್ ಕಟ್ಟುವವರ ಸಂಖ್ಯೆ ದುಪ್ಪಟ್ಟಾಗಿದೆ ಎನ್ನಲಾಗಿದೆ.

# ಬ್ರಾಹ್ಮಣ ಮಹಾಸಭೆಗೆ ಆಲೂರ ಅಧ್ಯಕ್ಷ

**ಬಾಗಲಕೋಟೆ :** ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾಧ್ಯಕ್ಷರಾಗಿ ನರಸಿಂಹ ಆಲೂರ, ಉಪಾಧ್ಯಕ್ಷರಾಗಿ ಸಂತೋಷ ಗದ್ದನಕೇರಿ ಹಾಗೂ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಶುಭದಾ ದೇಶಪಾಂಡೆ ಅವರನ್ನು ಆಯ್ಕೆ ಮಾಡಲಾಗಿದೆ.



ಮುಧೋಳದಲ್ಲಿ ಶನಿವಾರ ಸಂಜೆ ನಡೆದ ಅಲ್ಲಿನ ತಾಲೂಕಾ ಬ್ರಾಹ್ಮಣ ಸಂಘದ 30ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಬ್ರಾಹ್ಮಣ ಮಹಾಸಭೆ ಅಧ್ಯಕ್ಷ ಅಶೋಕ ಹಾರನಹಳ್ಳಿ ಅವರು ಈ ಆಯ್ಕೆಯನ್ನು ಘೋಷಿಸಿದರು.

ಎಕೆಬಿಎಂಎಸ್ ಜಿಲ್ಲಾಧ್ಯಕ್ಷ ಕೆ.ಎಸ್. ದೇಶಪಾಂಡೆ ಅವರ ನಿಧನದ ನಂತರ ಆ ಸ್ಥಾನ ಖಾಲಿಯಾಗಿತ್ತು. ಈಗ ಸಮಾಜದ ಹಿರಿಯರಾದ ನರಸಿಂಹ ಆಲೂರ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಮಹಸಭೆ ರಾಜ್ಯ ಉಪಾಧ್ಯಕ್ಷ ಡಾ.ಗಿರೀಶ ಮಸೂರಕರ ತಿಳಿಸಿದ್ದಾರೆ.

# ಆರ್‌ಸಿಬಿ ಭಕ್ತನಿಂದ ಕೋಹ್ಲಿಯ ರಕ್ತಚಿತ್ರ ರಚನೆ

**ಮಹಾಲಿಂಗಪುರ :** ಐಪಿಎಲ್ ಪಂದ್ಯದಲ್ಲಿ ಚೆನ್ನೈ ವಿರುದ್ಧ ಬೆಂಗಳೂರು ತಂಡ ಆರ್‌ಸಿಬಿ ಗೆದ್ದು ಬೀಗಿದ ಹಿನ್ನೆಲೆಯಲ್ಲಿ ಮಧ್ಯರಾತ್ರಿ ಆರ್‌ಸಿಬಿಯ ಕ್ರೇಜಿ ಅಭಿಮಾನಿಗಳು ಪಟ್ಟಣದಲ್ಲಿ ಸಂಭ್ರಮಾಚರಣೆ ಮಾಡಿದರು. ಮನೆಯಲ್ಲೇ ಕುಳಿತು ಮ್ಯಾಚ್ ನೋಡಿದವರು ಗೆದ್ದ ಖುಷಿ ಹಂಚಿಕೊಳ್ಳಲು ಪ್ರಮುಖ ವೃತ್ತಗಳಲ್ಲಿ ಸೇರಿದರು. ಪಂದ್ಯದ ರೋಚಕತೆಯನ್ನು ಹೇ(ಕೇ)ಳಿ ಸಂಭ್ರಮಿಸಿದರು. ನಿರಾಳ ರಸ್ತೆಗಳಲ್ಲಿ ಬೈಕ್‌ಗಳು ಗರ್ಜಿಸಿದವು. ಈ ಬಾರಿ ಕಪ್ ನಮ್ಮದೇ ಎಂಬ ಘೋಷಣೆಯೊಂದಿಗೆ ವಿಜಯೋತ್ಸವ ಆಚರಿಸಿದರು. ಮಳೆ ಬಂದ ನಂತರವೇ ಮನೆ ಸೇರಿದರು.




ಏತನ್ಮಧ್ಯೆ ರನ್ನಬೆಳಗಲಿಯ ಚಿತ್ರಕಲಾವಿದ, ಮಹಾಲಿಂಗಪುರ ಎಸ್‌ಸಿಪಿ ಪ್ರೌಢಶಾಲೆ ಮತ್ತು ಜೇಸಿ ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕ ಶಿವಾನಂದ ನೀಲನ್ನವರ ತನ್ನ ರಕ್ತದಲ್ಲೇ ಕುಂಚ ಅದ್ದಿ ಆರ್‌ಸಿಬಿ ತಂಡದ ದತ್ತು ಪುತ್ರ ವಿರಾಟ್ ಕೋಹ್ಲಿ ಭಾವಚಿತ್ರ ಬಿಡಿಸುವ ಮೂಲಕ ಅಭಿಮಾನ ಮೆರೆದರು. ಕೋಹ್ಲಿಗೆ ಸಮರ್ಪಿಸಿದ ಆರ್‌ಸಿಬಿ ಭಕ್ತನ ರಕ್ತಚಿತ್ರ ನೋಡಿದ ಅಭಿಮಾನಿಗಳು ಮತ್ತಷ್ಟು ಖುಷಿಯಾಗಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State